# ಕಾರ್ಯಕಾರಿ ಸಾರಾಂಶ

ಈ ಅಧ್ಯಯನವು, ಬೃ.ಬೆಂ.ಮ.ಪಾ (BBMP); ಬಿಡಿಎ (BDA); ಕ.ಕೈ.ಪ್ರ.ಅ.ಮಂ (KIADB); ಕ.ರಾ.ಮಾ.ನಿ.ಮಂ (KSPCB); ಕಂದಾಯ (Revenue); ಕಾರ್ಮಿಕ (Labour); ಕಾರ್ಖಾನೆಗಳು, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ (Factories, Boilers, Industrial Safety & Health); ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (BWSSB), ಮುಂತಾದ ಕರ್ನಾಟಕದ ಹದಿನೇಳು ಲೈನ್ ಇಲಾಖೆಗಳಲ್ಲಿ ಐವತ್ತೇಳು ಕೈಗಾರಿಕಾ ಹಾಗೂ ನಾಗರೀಕ ಸೇವೆಗಳ[1] ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡುತ್ತದೆ. ಈ ಸೇವೆಗಳ ಪರಿಣಾಮಕಾರಿತ್ವ ನಿರ್ಣಯಿಸಲು ಹಾಗೂ ಪಾರದರ್ಶಕತೆಯನ್ನು ಉತ್ತಮಪಡಿಸಲು ಸುಧಾರಣೆ ತರಬೇಕಾದ ಕ್ಷೇತ್ರಗಳನ್ನು ಹಾಗೂ ಚಾಲ್ತಿಯಲ್ಲಿರುವ ಪ್ರಮುಖ ರೂಢಿಗಳನ್ನು ಗುರುತಿಸುತ್ತದೆ ಮತ್ತು ರಾಜ್ಯದಲ್ಲಿ ಸ್ಥಳೀಯ ಹಾಗೂ ವಿದೇಶಿ ಹೂಡಿಕೆಗಳನ್ನು ಆಕರ್ಷಿಸಲು ವಿವರವಾದ ಮೌಲ್ಯಮಾಪನವನ್ನು ಈ ಅಧ್ಯಯನ ಕೈಗೊಳ್ಳುತ್ತದೆ.

ಸವಿಸ್ತಾರವಾಗಿ ಈ ಅಧ್ಯಯನವು, 1 ಏಪ್ರಿಲ್ 2019 ರಿಂದ 31 ಮಾರ್ಚ್ 2020 ರವರೆಗಿನ ಕಾಲಘಟ್ಟದಲ್ಲಿ ಈ ಕೆಳಗಿನ ವಿಶೇಷ ವ್ಯವಸ್ಥೆಯನ್ನು ಅಧ್ಯಯನ ಮಾಡುತ್ತದೆ :

1 ಸಕಾಲದ (SAKALA) ಸೇವಾ ಅರ್ಜಿಗಳ ದತ್ತಾಂಶಗಳಿಂದ ಪಡೆದುಕೊಂಡ, ಪ್ರಕಿಯಗೊಳಿಸಲಾದ ಅರ್ಜಿಗಳ ಪ್ರಮಾಣ, ಅನುಮೋದನೆ/ನಿರಾಕರಣೆ ಪ್ರಮಾಣ, ನಿರಾಕರಣೆಗೆ ಕಾರಣಗಳು ಮತ್ತು ಸಕಾಲ ಕಾಲಾವಧಿಯ ಅನುಸರಣೆ

2 ಕೂಲಂಕುಷವಾದ ಸಂದರ್ಶನಗಳ (ಐಡಿಐಗಳು) ಮೂಲಕ ಸೇವಾ ಪೂರೈಕೆ ಕುರಿತು ಮುಂಚೂಣಿಯಲ್ಲಿರುವ ಇಲಾಖೆಗಳ ಸಿಬ್ಬಂದಿಯ ಅಭಿಪ್ರಾಯ

3 ತಲುಪುವಿಕೆ, ಸುಲಭ ಬಳಕೆ, ವಿಷಯ ಲಭ್ಯತೆ ಮತ್ತು ಮಾಹಿತಿಯ ಭದ್ರತೆ ಹಾಗೂ ಖಾಸಗಿತನ ಈ ಸೇವೆಗಳ ಮೌಲ್ಯಮಾಪನ ಮಾಡಲು NeSDA (ರಾಷ್ಟ್ರೀಯ ಇ–ಆಡಳಿತ ಸೇವಾ ವಿತರಣಾ ಮೌಲ್ಯಮಾಪನ) ಉಪಯೋಗಿಸಿ ಸೇವೆಗಳ ಮೌಲ್ಯಮಾಪನ ಒಳಗೊಂಡಂತೆ, ಪೂರೈಕೆ / ಈಡೇರಿಕೆಯ ವಿಧಾನ– ಅವುಗಳು ಆನ್‌ಲೈನ್ ಮೂಲಕವೇ ಅಥವಾ ಆನ್‌ಲೈನ್ ಹೊರತಾಗಿಯೆ ಆಗಿರಲಿ.

4 ಸಂಕ್ಷಿಪ್ತ ಸಮೀಕ್ಷೆ ಮತ್ತು ಸಾಮೂಹಿಕ ಚರ್ಚೆಗಳ (FGD) ಮೂಲಕ ಉದ್ದಿಮೆ ಸೇವೆಗಳ ಬಗ್ಗೆ ಹೂಡಿಕೆದಾರರ ದೃಷ್ಟಿಕೋನ.

ಸಲಹೆ ನೀಡಲು/ಶಿಫಾರಸ್ಸು ಮಾಡಲು ಮೇಲೆ ತಿಳಿಸಿರುವ ಸಾಧನಗಳಿಂದ ಹೊರಹೊಮ್ಮಿದ ಸಂಚಿತ ಫಲಿತಾಂಶಗಳನ್ನು ಉಪಯೋಗಿಸಲಾಗಿದೆ. ರಾಜ್ಯ ಏಕ ಗವಾಕ್ಷಿ ಕಾರ್ಯಕ್ಷಮತೆ ಸುಧಾರಿಸಲು, ಭೂಮಿಯ ಹಂಚಿಕೆಗೆ ಮತ್ತು ಕೈಗಾರಿಕಾ ಅನುಮೋದನೆಗೆ ಈ ವರದಿಯಲ್ಲಿ ಕೆಲವು ಮುಖ್ಯ ಶಿಫಾರಸ್ಸುಗಳು ಒಳಗೊಂಡಿರುವುದರ ಜೊತೆಗೆ ಅತಿಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಬೆಂಬಲವನ್ನೂ ಒದಗಿಸುತ್ತದೆ.

[1] *List of services as detailed in section 3.1 of Inception Report for Evaluation Study of Business Reforms Karnataka submitted to KEA*

## ಅಧ್ಯಯನದಿಂದ ಹೊರಹೊಮ್ಮಿದ ಮುಖ್ಯ ಅವಲೋಕನಗಳು:

ಕಾರ್ಯಕ್ಷಮತೆಯ ಆಧಾರದ ಮೇಲೆ ಮೌಲ್ಯಮಾಪನಕ್ಕೊಳಪಟ್ಟ ಇಲಾಖೆಗಳನ್ನು "ಮುಂಚೂಣಿಯಲ್ಲಿರುವ ಇಲಾಖೆಗಳು" ಹಾಗೂ "ಗಮನ ಹರಿಸಬೇಕಾದ ಇಲಾಖೆಗಳು" ಎಂದು ವಿಂಗಡಿಸಬಹುದಾಗಿದೆ. ಸಕಾಲ ಕಾಲಾವಧಿಗೆ ಬದ್ಧವಾಗಿರುವ ವಿಷಯದಲ್ಲಿ "ಪ್ರಕ್ರಿಯೆಯ ಕಾರ್ಯಕ್ಷಮತೆ", NeSDA ಅಂಕದಿಂದ ಪ್ರಮಾಣೀಕರಿಸಲ್ಪಟ್ಟ ಮಾಹಿತಿ ತಂತ್ರಜ್ಞಾನದ ಮತ್ತು ಸಕ್ರಿಯಗೊಳಿಸುವಿಕೆ ಅನುಮೋದನೆ/ನಿರಾಕರಣೆಯಿಂದ ಮಾಪಿಸಲ್ಪಟ್ಟಂತೆ "ಪಾಲುದಾರರೊಂದಿಗೆ ಸಂಪರ್ಕ" ಮುಂತಾದ ಮಾನದಂಡಗಳಲ್ಲಿ ನೋಡಿದಾಗ ಪ್ರಮುಖ ಇಲಾಖೆಗಳು ಸರಾಸರಿಗಿಂತ (70% ಮೇಲ್ಪಟ್ಟು) ಉತ್ತಮ ಕಾರ್ಯಪ್ರದರ್ಶನ ಹೊಂದಿವೆ. ಗಮನ ಹರಿಸಬೇಕಾದ ಇಲಾಖೆಗಳನ್ನು ತೆಗೆದುಕೊಂಡರೆ, ಒಂದು ಅಥವಾ ಎಲ್ಲಾ ಮೂರು ಮಾನದಂಡಗಳಲ್ಲಿ ಸುಧಾರಣೆಯ ಅಗತ್ಯವಿದೆ.

ನಿರಾಕರಣೆಗೆ ಕಾರಣಗಳು ಏನೇ ಇರಲಿ, ದಾಖಲೆಗಳು ಅನುಮೋದನೆ ಪಡೆಯುವುದು ಅಥವಾ ನಿರಾಕರಣೆಗೊಳ್ಳುವುದು ಕಡಿಮೆ ಅನುಮೋದನೆ ಪ್ರಮಾಣ, ಅಥವಾ ಹೆಚ್ಚಿನ ನಿರಾಕರಣೆ ಪ್ರಮಾಣವನ್ನು "ಪಾಲುದಾರರೊಂದಿಗಿನ ಸಂಬಂಧ"ವು ಕಡಿಮೆ ಇದೆ ಎಂದೇ ಪರಿಗಣಿಸಲಾಗುತ್ತದೆ. ಇವು ಪಾಲುದಾರರ ದೃಷ್ಟಿಕೋನದ ಮೇಲೆ ಪ್ರಭಾವ ಬೀರುತ್ತವೆ. ಮುಖ್ಯವಾಗಿ, ಪ್ರಕ್ರಿಯೆ/ಬೇಕಾದ ದಾಖಲೀಕರಣದ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ಸಕ್ರಿಯವಾದ ಹಾಗೂ ನಿಖರವಾದ ಹಾಗೂ ಸ್ಪಷ್ಟವಾದ ಸಂವಹನದಿಂದ ನಿರಾಕರಣೆಗಳ ಪ್ರಮಾಣ ಗಣನೀಯವಾಗಿ ಕಡಿಮೆಯಾಗುತ್ತದೆ.

- **ಮುಂಚೂಣಿಯಲ್ಲಿರುವ ಇಲಾಖೆಗಳು:** ಮುಂಚೂಣಿಯಲ್ಲಿರುವ ಇಲಾಖೆಗಳೆಂದರೆ ನೋಂದಣಿ ಮತ್ತು ಮುದ್ರಾಂಕಗಳ ಮಹಾ ಪರಿವೀಕ್ಷಕರು, ಕಾರ್ಖಾನೆಗಳು, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ .

### ಮುಂಚೂಣಿಯಲ್ಲಿರುವ ಇಲಾಖೆಗಳ ವಿಶ್ಲೇಷಣೆ:

| ರಾಜ್ಯ ಮಟ್ಟದ ಇಲಾಖೆಗಳು | ದೊರೆಯುವ ಸೇವೆಗಳ ಹೆಸರು | ಮಂಜೂರಾತಿಯ ಪ್ರಮಾಣ | ಸಕಾಲ ಅನುಸರಣೆ | NeSDA ಅಂಕಗಳು | ಅಭಿಪ್ರಾಯಗಳು |
|---|---|---|---|---|---|
| ನೋಂದಣಿ ಮತ್ತು ಮುದ್ರಾಂಕಗಳ ಮಹಾ ನಿರೀಕ್ಷಕರು | ಭೂಮಿ / ಆಸ್ತಿಯ ನೋಂದಣಿ | 85% | 100% | 70% | ಇಲಾಖೆಯ ಸಕಾಲ ಅನುಸರಣೆ ಮತ್ತು ಅನುಮೋದನೆಯ ಪ್ರಮಾಣ ತೌಲನಿಕವಾಗಿ ಅತಿ ಹೆಚ್ಚು. ಇದರ ಕಾವೇರಿ ಪೋರ್ಟಲ್ ಸಾಕಷ್ಟು ಉತ್ತಮ ವಿನ್ಯಾಸದೊಂದಿಗೆ , ಅತಿಸುಲಭ ಬಳಕೆ ಮತ್ತು ಸೇವಾ ಪೂರೈಕೆ ಗೆ ಸಹಕಾರಿಯಾಗಿದೆ. |
| | ಸಂಸ್ಥೆಗಳ ನೋಂದಣಿ | 100% | 75% | 70% | |
| ಕಾರ್ಖಾನೆಗಳ ಇಲಾಖೆ | ಕಾರ್ಖಾನೆಯ ಕಟ್ಟಡ ನಕ್ಷೆ ಅನುಮೋದನೆ | 87% | 70% | 84% | ಇಲಾಖೆಯು ಹೆಚ್ಚಿನ ಅನುಮೋದನೆ ಪ್ರಮಾಣ ಮತ್ತು ಸಕಾಲ ರಾಜ್ಯಮಟ್ಟದ ಇಲಾಖೆಗಳೊಂದಿಗೆ ಸರಾಸರಿಗಿಂತ ಮೇಲ್ಪಟ್ಟ ಅನುಸರಣೆ ಹೊಂದಿದ್ದರೂ, ಎರಡು ಸೇವೆಗಳು ಸಂಪೂರ್ಣ ಆಫ್ ಲೈನ್ ಆಗಿವೆ. ಆನ್ ಲೈನ್ ಮೂಲಕ ಲಭ್ಯವಿರುವ ಸೇವೆಗಳಿಗೆ ಕೆಲ ಮಾನವ ಮಧ್ಯಪ್ರವೇಶಿಕೆ (ಭೌತಿಕ ತಪಾಸಣೆ ಮತ್ತು ದಾಖಲೆಗಳ ಪರಿಶೀಲನೆ ಮುಂತಾದವು) ಅಗತ್ಯವಿರುತ್ತದೆ, ವಿಶೇಷವಾಗಿ ಕಟ್ಟಡ ನಕ್ಷೆ ಅನುಮೋದನೆಯಂತಹ ಸೇವೆಗಳಿಗೆ. |
| | ಕಾರ್ಖಾನೆಗಳ ನೋಂದಣಿ ಮತ್ತು ಪರವಾನಗಿ ನೀಡುವಿಕೆ | 86% | 70% | 84% | |
| | ಬಾಯ್ಲರ್ ಅನುಮೋದನೆ | 95% | 70% | ಅನ್ವಯಿಸುವುದಿಲ್ಲ – ಆಫ್ ಲೈನ್ | |
| | ಬಾಯ್ಲರ್ ಗಳ ನೋಂದಣಿ | 92% | 70% | 84% | |
| | ಬಾಯ್ಲರ್ ಮಾನ್ಯತೆಗಾಗಿ ಪ್ರಮಾಣಪತ್ರ | 92% | 77% | ಅನ್ವಯಿಸುವುದಿಲ್ಲ – ಆಫ್ ಲೈನ್ | |
| ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | ನೀರಿಗಾಗಿ ಹೊಸ ಸಂಪರ್ಕಕ್ಕೆ ಅನುಮತಿ | 81% | 70% | 87% | ಇಲಾಖೆಗೆ ಬರುವ ಹೆಚ್ಚಿನ ಪ್ರಶ್ನೆಗಳು ಅರ್ಜಿ ಪ್ರಕ್ರಿಯೆಗಳು / ಕಾರ್ಯವಿಧಾನಗಳ ಕುರಿತಾಗಿರುತ್ತವೆ. ಇಲಾಖೆಯು ಅನುಮೋದನೆ ಪ್ರಮಾಣಕ್ಕೆ ಹೆಚ್ಚಿನ ಅಂಕಗಳನ್ನು ನೀಡಿದರೂ ಅರ್ಜಿದಾರರು ಒದಗಿಸುವ ಅಸಮರ್ಪಕ ದಾಖಲೆಗಳೇ ಪ್ರಕ್ರಿಯೆಗಳ ವಿಳಂಬಕ್ಕೆ ಕಾರಣವಾಗಿದೆ. |

**ಗಮನ ಹರಿಸಬೇಕಾದ ಇಲಾಖೆಗಳು:** ಮೇಲೆ ತಿಳಿಸಿದ ಮಾನದಂಡಗಳ ಪೈಕಿ ಒಂದು ಅಥವಾ ಎಲ್ಲಾ ಮೂರು ವಿಷಯಗಳಲ್ಲಿ ಈ ಇಲಾಖೆಗಳು ಕಡಿಮೆ ಪ್ರದರ್ಶನ ಅಂಕ (70%ಗಿಂತ ಕಡಿಮೆ) ಹೊಂದಿವೆ. ಈ ಇಲಾಖೆಗಳಲ್ಲಿ ಸುಧಾರಣೆಗಳು ಅವಶ್ಯವಿರುವ ಮಾನದಂಡಗಳನ್ನು ಕೆಳಗಿನ ಕೋಷ್ಟಕ ಗುರುತಿಸುತ್ತದೆ. ಅದರ ಮುಂದಿನ ಕೋಷ್ಟಕವು ಮೌಲ್ಯಮಾಪನಕ್ಕೊಳಪಟ್ಟ ಎಲ್ಲಾ ಸೇವೆಗಳಿಗೆ ವಿವರವಾದ ಅಂಕವನ್ನು ಒದಗಿಸುತ್ತದೆ.

| ಲೈನ್ ಇಲಾಖೆಗಳು | ಪ್ರಕ್ರಿಯೆ ಕಾರ್ಯಕ್ಷಮತೆ ಅಗತ್ಯವಿದೆ | ಮಾಹಿತಿ ತಂತ್ರಜ್ಞಾನ ಸುಧಾರಣೆ ಅಗತ್ಯವಿದೆ | ಪಾಲುದಾರರೊಂದಿಗೆ ಇನ್ನೂ ಉತ್ತಮ ಸಂಪರ್ಕ ಹೊಂದುವ ಅಗತ್ಯವಿದೆ |
|---|---|---|---|
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬೃ.ಬೆಂ.ಮ.ಪಾ.) | | ☑ | ☑ |
| ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) | | ☑ | |
| ಕಾನೂನು ಮಾಪನಶಾಸ್ತ್ರ ಇಲಾಖೆ | ☑ | ☑ | ☑ |
| ಔಷಧ ನಿಯಂತ್ರಣ ಇಲಾಖೆ | | ☑ | |
| ಕಾರ್ಮಿಕ ಇಲಾಖೆ | | ☑ | |
| ಕಂದಾಯ ಇಲಾಖೆ | ☑ | ☑ | ☑ |
| ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ | ☑ | | |
| ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ | ☑ | ☑ | ☑ |
| ಕರ್ನಾಟಕ ಅಗ್ನಿ ಮತ್ತು ತುರ್ತು ಸೇವೆ ಇಲಾಖೆ | | | ☑ |
| ಬೆಸ್ಕಾಂ | | | ☑ |
| ವಾಣಿಜ್ಯ ತೆರಿಗೆ ಇಲಾಖೆ | | ☑ | |
| ಪೌರಾಡಳಿತ ನಿರ್ದೇಶನಾಲಯ | | | ☑ |
| ಸಹಕಾರ ಸಂಘಗಳ ರಿಜಿಸ್ಟ್ರಾರ್ | | ☑ | ☑ |
| ವಿದ್ಯುತ್ ಪರಿವೀಕ್ಷಣೆ (ಎಲೆಕ್ಟ್ರಿಕ ಇನ್ಸ್‌ಪೆಕ್ಟೊರೇಟ್) ಇಲಾಖೆ | | | ☑ |

## ಗಮನ ಹರಿಸಬೇಕಾದ ಇಲಾಖೆಗಳ ವಿಶ್ಲೇಷಣೆ:

| ರಾಜ್ಯ ಮಟ್ಟದ ಇಲಾಖೆಗಳು | ದೊರೆಯುವ ಸೇವೆಗಳ ಹೆಸರು | ಮಂಜೂರಾತಿಯ ಪ್ರಮಾಣ | ಸಕಾಲ ಅನುಸರಣೆ | NeSDA ಅಂಕಗಳು | ಅಭಿಪ್ರಾಯಗಳು |
|---|---|---|---|---|---|
| ವಾಣಿಜ್ಯ ತೆರಿಗೆ ಇಲಾಖೆ | ವೃತ್ತಿಗಳ ಮೇಲಿನ ಕರ್ನಾಟಕ ತೆರಿಗೆ ಅಡಿಯಲ್ಲಿ ನೋಂದಣಿ ಪೂರೈಕೆ | 100% | 100% | **53%** | ಇಲಾಖೆಯು ಅನುಮೋದನೆ ಪ್ರಮಾಣ ಮತ್ತು ಸಕಾಲ ಅನುಸರಣೆಯಲ್ಲಿ 100% ಅಂಕ ಪಡೆದರೆ, ಸೇವೆಯನ್ನು ನೀಡುವ ಅದರ ಪೋರ್ಟಲ್‌ಗೆ ಮಾಹಿತಿ ಸುರಕ್ಷತೆ, ಅರ್ಜಿಯ ಸ್ಥಿತಿಗತಿ ಟ್ರ್ಯಾಕಿಂಗ್ ಮತ್ತು ಕನ್ನಡದಲ್ಲಿ ಮಾಹಿತಿಯ ಲಭ್ಯತೆ ಯಂತಹ ಕ್ಷೇತ್ರಗಳಲ್ಲಿ ಸಾಕಷ್ಟು ಸುಧಾರಣೆಯ ಅಗತ್ಯವಿದೆ. |
| ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ | ಹಸಿರು ವರ್ಗ ಕೈಗಾರಿಕೆಗಳಿಗೆ ಸ್ಥಾಪನೆ / ವಿಸ್ತರಣೆಗಾಗಿ ಅನುಮತಿ (COE) | N97% | **53%** | 93% | ಸಕಾಲ ಕಾಲಮಿತಿಯ ಅನುಸರಣೆಯಲ್ಲಿ ಕೆಂಪು ವರ್ಗದ ಸೇವೆಗಳಿಗೆ ಇಲಾಖೆಯು ಕಡಿಮೆ ಅಂಕ ಪಡೆದಿದೆ, ಇದಕ್ಕೆ ಮುಖ್ಯ ಕಾರಣ, ಅಂತಹ ಅರ್ಜಿಗಳಿಗೆ ಹೆಚ್ಚಿನ ಪರಿಶೀಲನೆಯ ಅಗತ್ಯವಿರುತ್ತದೆ.<br><br>ಆದಾಗ್ಯೂ, ಹಸಿರು ವರ್ಗಕ್ಕೆ ಸಂಬಂಧಿಸಿದಂತೆ, ಪದೇ ಪದೇ ತಪಾಸಣೆ ಅವಲೋಕನಗಳ ಮತ್ತು ಅರ್ಜಿದಾರರಿಂದ ಅಸಮರ್ಪಕ ಪೂರಕದಾಖಲೆಗಳ ಸಲ್ಲಿಸುವಿಕೆಯು ಕಡಿಮೆ ಸಕಾಲ ಅನುಸರಣೆಗೆ ಕಾರಣವೆಂದು ಇಲಾಖೆ ಅಧಿಕಾರಿಗಳು ಹೇಳಿದ್ದಾರೆ |
| | ಕೆಂಪು ವರ್ಗದ ಕೈಗಾರಿಕೆಗಳಿಗೆ ಸಿಒಇ EIA-ಹೊರತುಪಡಿಸಿ (Environmental Impact Assesment) | 92% | **41%** | 93% | |
| | ಹಸಿರು ವರ್ಗದ ಕೈಗಾರಿಕೆಗಳ ಕಾರ್ಯಾಚರಣೆಗೆ ಅನುಮತಿ (CFO-Consent for Operation) | 99% | 78% | 93% | |
| | ಕೇಸರಿ ವರ್ಗದ ಕೈಗಾರಿಕೆಗಳಿಗೆ CFO ಮೂಲಸೌಕರ್ಯ ಯೋಜನೆಗಳನ್ನು ಹೊರತುಪಡಿಸಿ | 96% | 74% | 93% | |
| | ಕೇಸರಿ ವರ್ಗದ ಮೂಲಸೌಕರ್ಯ ಯೋಜನೆಗಳ CFO | 98% | 71% | 93% | |
| | ಕೆಂಪುವರ್ಗದ ಕೈಗಾರಿಕೆಗಳಿಗೆ CFO EIA ಯೋಜನೆಗಳು- | 95% | **57%** | 93% | |
| | ಕೆಂಪುವರ್ಗದ ಕೈಗಾರಿಕೆಗಳಿಗೆ CFO EIA ಹೊರತುಪಡಿಸಿ | 96% | **43%** | 93% | |
| | ಹಸಿರು ವರ್ಗದ ಕೈಗಾರಿಕೆಗಳಿಗೆ ಅಪಾಯಕಾರಿ ಮತ್ತು ಇತರ ತ್ಯಾಜ್ಯಗಳಿಗೆ ಅಧಿಕೃತ ಅನುಮತಿ (AHOW) | 96% | 84% | 93% | |
| | ಕೇಸರಿ ವರ್ಗದ ಕೈಗಾರಿಕೆಗಳಿಗೆ ಅಪಾಯಕಾರಿ ಮತ್ತು ಇತರ ತ್ಯಾಜ್ಯಗಳಿಗೆ ಅಧಿಕೃತ ಅನುಮತಿ (AHOW) | 99% | 76% | 93% | |
| | ಕೆಂಪು ವರ್ಗದ ಕೈಗಾರಿಕೆಗಳಿಗೆ ಅಪಾಯಕಾರಿ ಮತ್ತು ಇತರ ತ್ಯಾಜ್ಯಗಳಿಗೆ ಅಧಿಕೃತ ಅನುಮತಿ (AHOW) | 90% | **35%** | 93% | |
| ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವೆಗಳು | ಎತ್ತರದ ಕಟ್ಟಡಗಳಿಗೆ ನಿರಾಕ್ಷೇಪಣಾ ಪತ್ರ ಗಳು(ಎನ್ ಓ ಸಿ) | 79% | **39%** | 76% | ಅರ್ಜಿದಾರರು ಪರಿಶೀಲನೆಯ ಅನುಸರಣೆ ಮಾಡದಿರುವುದು ಮತ್ತು ಇತರ ಲೈನ್ ಇಲಾಖೆಗಳೊಂದಿಗಿನ ಪದೇಪದೇ ಸಂವಹನಗಳು ಈ ವಿಳಂಬಗಳಿಗೆ ಪ್ರಾಥಮಿಕ ಕಾರಣಗಳಾಗಿವೆ. ಇಲಾಖೆಗಳು ನೀಡುವ ಸೇವೆಗಳು ಇನ್ನೂ ಮಾನವ ಮಧ್ಯಪ್ರವೇಶಿಕೆ ಮತ್ತು ಆಫ್‌ಲೈನ್ ಸಂವಹನಗಳನ್ನು ಹೊಂದಿವೆ. |
| | ವಿಮೋಚನೆ ಪ್ರಮಾಣಪತ್ರ | 100% | **2%** | 76% | |

| ರಾಜ್ಯ ಮಟ್ಟದ ಇಲಾಖೆಗಳು | ದೊರೆಯುವ ಸೇವೆಗಳ ಹೆಸರು | ಮಂಜೂರಾತಿಯ ಪ್ರಮಾಣ | ಸಕಾಲ ಅನುಸರಣೆ | NeSDA ಅಂಕಗಳು | ಅಭಿಪ್ರಾಯಗಳು |
|---|---|---|---|---|---|
| ಬೆಸ್ಕಾಂ | ಹೆಚ್ಚುವರಿ / ಹೊಸ ಸಂಪರ್ಕಕ್ಕಾಗಿ ಅರ್ಜಿ- LT2 & LT3 | 79% | **67%** | 89% | ಇಲಾಖೆಯ ತುಲನಾತ್ಮಕವಾದ ಕಡಿಮೆ ಪ್ರಮಾಣದ ಅನುಮೋದನೆ ಮತ್ತು ಅನುಸರಣೆಯ ಕಾರಣಗಳು ಈ ರೀತಿ ಇವೆ:<br>1) ಅರ್ಜಿದಾರರು ಸಲ್ಲಿಸಿದ ವಿಳಾಸ, ನಿರ್ಮಾಣ ಹಂತ, ಬೋರ್ ಗಾತ್ರ ಮುಂತಾದ ಮಾಹಿತಿಯ ಹೊಂದಾಣಿಕೆಯಾಗದಿರುವುದು<br>2) ಅರ್ಜಿದಾರರ ಶುಲ್ಕವನ್ನು ಪಾವತಿಸದಿರುವುದು, ಕಟ್ಟಡದ ಫೋಟೋ, ಇತರ ಇಲಾಖೆಯಿಂದ ಎನ್‌ಓಸಿಗಳಂತಹ ಬೆಂಬಲವನ್ನು ಸಲ್ಲಿಸದಿರುವುದು ನಿರಾಕರಣೆಗೆ ಕಾರಣ<br>3) ತಪ್ಪಾದ ಅಧಿಕಾರ ಕ್ಷೇತ್ರದ ವ್ಯಾಪ್ತಿಯಲ್ಲಿ ಅರ್ಜಿಗಳನ್ನು ಸಲ್ಲಿಸುವುದು |
| ಕಾರ್ಮಿಕ ಇಲಾಖೆ | ಕರ್ನಾಟಕ ಅಂಗಡಿಗಳು ಮತ್ತು ಸಂಸ್ಥೆಗಳ ಕಾಯಿದೆ ಅಡಿಯಲ್ಲಿ ನೋಂದಣಿ | 87% | **68%** | 70% | ಈ ಕೆಳಗಿನ ಪ್ರಮುಖ ಅವಲೋಕನಗಳಿಂದಾಗಿ ಕಾರ್ಮಿಕ ಇಲಾಖೆಯ NeSDA ಮೌಲ್ಯಮಾಪನ ಅಂಕಗಳು ಇಲಾಖೆಯ ಎಲ್ಲಾ ಸೇವೆಗಳಲ್ಲೂ ಕಡಿಮೆ ಇವೆ:<br>1) ಬಳಕೆದಾರರು ತಮ್ಮ ವಿನಂತಿಗಳ ಸ್ಥಿತಿಯನ್ನು ಪರಿಣಾಮಕಾರಿಯಾಗಿ ಪತ್ತೆಹಚ್ಚಲು ಮತ್ತು ಸಮಯೋಚಿತ ನವೀಕರಣಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ<br>2) ವೆಬ್‌ಸೈಟ್ ವಿಷಯವು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲ<br>3) ದೂರುಗಳು / ಕುಂದುಕೊರತೆಗಳನ್ನು ದಾಖಲಿಸಲು ಮತ್ತು ಪ್ರತಿಕ್ರಿಯೆಯನ್ನು ಒದಗಿಸಲು ವಿಶೇಷ ವ್ಯವಸ್ಥೆ (ಫೀಚರ್) ಲಭ್ಯತೆ ಇಲ್ಲ<br>4) ಮಾಹಿತಿ ಸುರಕ್ಷತೆಯ ಕೊರತೆ |
| | ಪ್ರಧಾನ ಉದ್ಯೋಗದಾತರ ನೋಂದಣಿ | 94% | 70% | **63%** | |
| | ಗುತ್ತಿಗೆದಾರನಿಗೆ ಪರವಾನಗಿ | 96% | 80% | **63%** | |
| | ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಾಯಿದೆ ಅಡಿಯಲ್ಲಿ ಸಂಸ್ಥೆಯ ನೋಂದಣಿ | 96% | 70% | **63%** | |
| | ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ನೋಂದಣಿ | 96% | 80% | **48%** | |
| | ಅಂತರ ರಾಜ್ಯ ವಲಸೆ ಕಾರ್ಮಿಕರ ಕಾಯಿದೆ ಅಡಿ ನೋಂದಣಿ | 75% | 75% | **63%** | |
| ಔಷಧ ನಿಯಂತ್ರಣ ಇಲಾಖೆ | ಹೊಸ ಔಷಧ ಉತ್ಪಾದನಾ ಪರವಾನಗಿಯ ಮಂಜೂರಾತಿ | **ಅರ್ಜಿದಾರರು ಇಲ್ಲ** | **ಅರ್ಜಿದಾರರು ಇಲ್ಲ** | **47%** | ಇಲಾಖೆಯ ವೆಬ್‌ಸೈಟ್, ವಿಶೇಷವಾಗಿ ಔಷಧ ಉತ್ಪಾದನಾ ಪರವಾನಗಿಯ ಪೋರ್ಟಲ್, ಮಾಹಿತಿ ಲಭ್ಯತೆ ಮತ್ತು ಬಳಕೆಯ ಸುಲಭತೆಯಲ್ಲಿ ಕಡಿಮೆ ಅಂಕ ಗಳಿಸಿದೆ. ಬಳಕೆದಾರರು ತಮ್ಮ ವಿನಂತಿಗಳ ಸ್ಥಿತಿಯನ್ನು ಪರಿಣಾಮಕಾರಿಯಾಗಿ ಪತ್ತೆಹಚ್ಚಲು ಸಾಧ್ಯವಾಗುತ್ತಿಲ್ಲ. ಮಾಹಿತಿ ಸುರಕ್ಷತಾ ಕ್ರಮಗಳಿಗೆ ಸಾಕಷ್ಟು ಸುಧಾರಣೆಯ ಅಗತ್ಯವಿದೆ |
| | ಚಿಲ್ಲರೆ ಮಾರಾಟಕ್ಕೆ ಪರವಾನಗಿ | 99% | 72% | 70% | |

## ಗಮನ ಹರಿಸಬೇಕಾದ ಇಲಾಖೆಗಳ ವಿಶ್ಲೇಷಣೆ :

| ರಾಜ್ಯ ಮಟ್ಟದ ಇಲಾಖೆಗಳು | ದೊರೆಯುವ ಸೇವೆಗಳ ಹೆಸರು | ಮಂಜೂರಾತಿಯ ಪ್ರಮಾಣ | ಸಕಾಲ ಅನುಸರಣೆ | NeSDA ಅಂಕಗಳು | ಅಭಿಪ್ರಾಯಗಳು |
|---|---|---|---|---|---|
| ಪೌರಾಡಳಿತ ನಿರ್ದೇಶನಾಲಯ | ವ್ಯಾಪಾರ ಪರವಾನಗಿ ನೀಡಿಕೆ | 93% | 33% | 69% | ಸಂಬಂಧಿತ ಲೈನ್ ಇಲಾಖೆಗಳೊಂದಿಗೆ ಪದೇಪದೇ ಸಂವಹನಗಳ ಅಗತ್ಯವಿರುವ ಪ್ರಕ್ರಿಯೆಗಳು ಮತ್ತು ಕಾರ್ಯವಿಧಾನಗಳು ಸಾಮಾನ್ಯವಾಗಿ ಕಡಿಮೆ ಸಕಾಲ ಅನುಸರಣೆಗೆ ಕಾರಣವಾಗುವ ವಿಳಂಬಕ್ಕೆ ಒಂದು ಕಾರಣವೆಂದು ಉಲ್ಲೇಖಿಸಲಾಗುತ್ತದೆ. ತಪಾಸಣೆ ಮತ್ತು ತಪಾಸಣೆ ಅವಲೋಕನಗಳ ಅನುಸರಣೆಯಿಂದಾಗಿ ಪದೇಪದೇ ಸಂವಹನ ಕ್ರಿಯೆಗಳು ವಿಳಂಬಕ್ಕೆ ಕಾರಣವೆಂದು ಕಂಡುಬರುತ್ತದೆ. ಒಂದು ಸೇವೆಯು ಸಂಪೂರ್ಣ ಆಫ್‌ಲೈನ್ ಆಗಿದೆ ಎಂಬುದನ್ನು ಇಲ್ಲಿ ಗಮನಿಸಬೇಕು |
| | ಕಟ್ಟಡ ಪರವಾನಗಿ ನೀಡಿಕೆ | 83% | 23% | 76% | |
| | ನೀರು ಸರಬರಾಜು ಮತ್ತು ಒಳಚರಂಡಿಗೆ ಅನುಮತಿ | 99% | 31% | 71% | |
| | ವಾಸದ ಪ್ರಮಾಣಪತ್ರ ನೀಡಿಕೆ | 97% | 65% | 76% | |
| | ಆಸ್ತಿ ಮಾಲೀಕತ್ವದ ಬದಲಾವಣೆ | 86% | 23% | ಅನ್ವಯಿಸುವುದಿಲ್ಲ - ಆಫ್‌ಲೈನ್ | |
| | ರಸ್ತೆ ಅಗೆಯುವಿಕೆಗೆ ಅನುಮತಿ | 99% | 87% | 76% | |
| ಸಹಕಾರಿ ಸಂಘಗಳ ರಿಜಿಸ್ಟ್ರಾರ್ | ಸಂಘಗಳ ನೋಂದಣಿ | 100% | 43% | 64% | ಪ್ರಕ್ರಿಯೆಯಲ್ಲಿನ ಮಾನವ ಮಧ್ಯಪ್ರವೇಶಿಕೆ (ಸಲ್ಲಿಸಿದ ದಾಖಲೆಗಳ ಭೌತಿಕ ಪರಿಶೀಲನೆ ಮತ್ತು ಈ ದಾಖಲೆಗಳ ಮತ್ತೆ ಮತ್ತೆ ಪರಿಶೀಲನೆ) ಆಗಾಗ್ಗೆ ವಿಳಂಬಕ್ಕೆ ಕಾರಣವಾಗುತ್ತದೆ. ಮಾಹಿತಿ ಲಭ್ಯತೆ, ಬಳಕೆಯ ಸುಲಭತೆ ಮತ್ತು ಬಳಕೆದಾರರು ತಮ್ಮ ಅರ್ಜಿಯಸ್ಥಿತಿಗತಿಯನ್ನು ಪತ್ತೆಹಚ್ಚುವ ಸಾಮರ್ಥ್ಯಗಳ ವಿಷಯದಲ್ಲಿ ವೆಬ್ ಪೋರ್ಟಲ್ ಅನ್ನು ಸಾಕಷ್ಟು ಸುಧಾರಿಸುವ ಅಗತ್ಯವಿದೆ. |
| ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) | ಸ್ವಾಧೀನ ಪ್ರಮಾಣಪತ್ರ ಪಡೆಯುವಿಕೆ | 93% | 75% | 31% | ಮಾಹಿತಿ ಲಭ್ಯತೆ , ಬಳಕೆಯ ಸುಲಭತೆ ಮತ್ತು ಮಾಹಿತಿ ಸುರಕ್ಷತೆಯ ವಿಷಯದಲ್ಲಿ ಇಲಾಖೆಯ ವೆಬ್‌ಸೈಟ್‌ಗೆ ಸಾಕಷ್ಟು ಸುಧಾರಣೆಯ ಅಗತ್ಯವಿದೆ. |
| ಕಂದಾಯ ಇಲಾಖೆ | ಕೃಷಿಯೇತರ ಉದ್ದೇಶಕ್ಕೆ ಕೃಷಿ ಭೂಮಿಯ ಪರಿವರ್ತನೆ | 59% | 68% | 69% | ಇತರ ಸಂಬಂಧಿತ ಇಲಾಖೆಯ ಅಧಿಕಾರಿಗಳೊಂದಿಗೆ ಪದೇಪದೇ ಸಂವಹನಗಳು ಅರ್ಜಿಗಳ ಪ್ರಕ್ರಿಯೆಗಳ ವಿಳಂಬಗಳಿಗೆ ಕಾರಣವಾಗಿದೆ. |

| ರಾಜ್ಯ ಮಟ್ಟದ ಇಲಾಖೆಗಳು | ದೊರೆಯುವ ಸೇವೆಗಳ ಹೆಸರು | ಮಂಜೂರಾತಿಯ ಪ್ರಮಾಣ | ಸಕಾಲ ಅನುಸರಣೆ | NeSDA ಅಂಕಗಳು | ಅಭಿಪ್ರಾಯಗಳು |
|---|---|---|---|---|---|
| ಕಾನೂನು ಮಾಪನಶಾಸ್ತ್ರ ಇಲಾಖೆ | ಹೊಸ ಪರವಾನಗಿ ನೀಡುವಿಕೆ | 53% | 45% | 73% | ಪ್ರಕ್ರಿಯೆಯ ಕುರಿತ ಅಸಮರ್ಪಕ ತಿಳುವಳಿಕೆ, ಅಸಮರ್ಪಕ ಪೂರಕ ದಾಖಲೆಗಳು ಮತ್ತು ತಪಾಸಣೆಗಳು ವಿಳಂಬ ಮತ್ತು ನಿರಾಕರಣೆಗೆ ಪ್ರಾಥಮಿಕ ಕಾರಣಗಳಾಗಿವೆ ಎಂದು ಇಲಾಖೆಯ ಅಧಿಕಾರಿಗಳೊಂದಿಗಿನ ಸಂವಹನವು ಬಹಿರಂಗಪಡಿಸಿತು. |
| ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ | ಭೂ ಹಂಚಿಕೆ | 80% | 51% | 67% | ತಪಾಸಣೆ ಮತ್ತು ಅವಲೋಕನಗಳ ಅನುಸರಣೆಗಳ ಮರುತಪಾಸಣೆಗಳು ವಿಳಂಬಕ್ಕೆ ಕಾರಣವೆಂದು ಉಲ್ಲೇಖಿಸಲಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಆಫ್‌ಲೈನ್ ಮೋಡ್‌ಗಳ ಮೂಲಕ ಪೂರಕ ದಾಖಲೆಗಳನ್ನು ಇನ್ನೂ ಸಲ್ಲಿಸಲಾಗುತ್ತಿದೆ. ಸಂಸ್ಕರಿಸಿದ ಅರ್ಜಿಗಳ ಕೇಂದ್ರೀಯ ಪ್ರವೃತ್ತಿ ಮಾಪನವು(Central tendency) ಭೂ ಹಂಚಿಕೆಗೆ ಮಂಜೂರಾದ ಸಮಯದ 7 ಪಟ್ಟಿಗಿಂತ ಹೆಚ್ಚು ಮತ್ತು ಬಿಪಿ (ಕಟ್ಟಡ ನಕ್ಷೆ)ಅನುಮೋದನೆಗಾಗಿ ಅನುಮೋದಿತ ಸಮಯದ 16 ಪಟ್ಟಿಗಿಂತ ಹೆಚ್ಚು ಸಮಯ ಇಲಾಖೆಗೆ ಅಗತ್ಯವಿದೆ ಎಂದು ಸೂಚಿಸುತ್ತದೆ. |
| | ಕಟ್ಟಡ ನಕ್ಷೆ ಅನುಮತಿ | 32% | 25% | 67% | |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) | ವ್ಯಾಪಾರ ಪರವಾನಗಿ | 94% | 73% | 60% | ಅರ್ಜಿದಾರರು ಸಲ್ಲಿಸಿದ ಅಸಮರ್ಪಕ ಪೂರಕ ದಾಖಲೆಗಳು, ಕಟ್ಟಡಗಳ ಬೈಲಾ ಗಳನ್ನು ಅನುಸರಿಸದಿರುವುದು, ತಪ್ಪು ಅಧಿಕಾರಕ್ಷೇತ್ರ ವ್ಯಾಪ್ತಿ, ಮೂಲ ದಾಖಲೆಗಳನ್ನು ಸಲ್ಲಿಸದಿರುವುದು ವಿಳಂಬಕ್ಕೆ ಕಾರಣವಾದ ಪ್ರಮುಖ ಕಾರಣಗಳು.ದಾಖಲೆಗಳ ಆಫ್‌ಲೈನ್ ಸಲ್ಲಿಕೆ ಇನ್ನೂ ಚಾಲ್ತಿಯಲ್ಲಿದೆ ಎಂದು ಅಧಿಕಾರಿಗಳೊಂದಿಗಿನ ಸಂವಹನದಿಂದ ತಿಳಿದುಬಂದಿದೆ. ಅಲ್ಲದೆ, ಬಳಕೆದಾರರಿಗೆ ಅವರ ಅರ್ಜಿಗಳ ಸ್ಥಿತಿಗತಿ ಬಗ್ಗೆ ಇಲಾಖೆಯು ಕೆಲವರಿಗೆ ಮಾತ್ರ ಮಾಹಿತಿಯನ್ನು ಒದಗಿಸುತ್ತಿದೆ.<br><br>ಸ್ವಾಧೀನ ಪ್ರಮಾಣಪತ್ರ ಮತ್ತು ಪ್ರಾರಂಭ ಪ್ರಮಾಣಪತ್ರಕ್ಕಾಗಿ ಮಾತ್ರ, ಭಾಗಶಃ ಡಾಟಾವನ್ನು (10 ರಲ್ಲಿ 4 ವಲಯಗಳಿಗೆ) ಇಲಾಖೆಯು ಲಭ್ಯಗೊಳಿಸಿದೆ. ಸ್ವಾಧೀನ ಪ್ರಮಾಣಪತ್ರ ವಿತರಣಾ ವಿಭಾಗವು 27 ಪಟ್ಟಿಗಿಂತ ಹೆಚ್ಚು, ಪ್ರಾರಂಭ ಪ್ರಮಾಣಪತ್ರ ಪೂರೈಕೆ ಗೆ ಅನುಮೋದಿತ ಸಮಯದ 9 ಪಟ್ಟಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಅನುಸರಣೆಯ ಕಡಿಮೆ ಪ್ರಮಾಣದಿಂದಾಗಿ NeSDA ಅಂಕಗಳನ್ನು ಪರಿಗಣಿಸಲಾಗುತ್ತಿಲ್ಲ.<br><br>ಟಿಪ್ಪಣಿ: ಖಾತಾ ನೋಂದಣಿ, ರಸ್ತೆಅಗೆಯುವಿಕೆಗೆ ಅನುಮತಿ ಮತ್ತು ಪೂರ್ಣಗೊಂಡ ಪ್ರಮಾಣಪತ್ರಕ್ಕಾಗಿ ಅರ್ಜಿದಾರರ ಡಾಟಾಗಳು ಸಂಬಂಧಪಟ್ಟ ಇಲಾಖೆಯಿಂದ ವಿಶ್ಲೇಷಣೆಗಾಗಿ ಲಭ್ಯವಿಲ್ಲ. ಇಲಾಖೆಯಿಂದ ಪಡೆದ ಅಭಿಪ್ರಾಯಗಳ ಪ್ರಕಾರ ಪೂರ್ಣಗೊಂಡ ಪ್ರಮಾಣಪತ್ರವು ಸ್ವತಂತ್ರ ಸೇವೆಯಲ್ಲ, ಆದರೆ ಸ್ವಾಧೀನ ಪ್ರಮಾಣಪತ್ರವನ್ನು ಪಡೆಯಲು ಒಂದು ಅರ್ಜಿ ನಮೂನೆ. |
| | ಕಟ್ಟಡ ನಕ್ಷೆ ಅನುಮತಿ | 89% | 47% | 67% | |
| | ಮರ ಕಡಿಯಲು ಮತ್ತು ಸಾಗಿಸಲು ಅನುಮತಿ | 64% | 52% | 47% | |
| | ರಸ್ತೆ ಅಗೆಯುವಿಕೆಗೆ ಅನುಮತಿ | ಮಾಹಿತಿ ಲಭ್ಯವಿಲ್ಲ | ಮಾಹಿತಿ ಲಭ್ಯವಿಲ್ಲ | 49% | |
| | ಖಾತೆಯ ನೋಂದಣಿ | ಮಾಹಿತಿ ಲಭ್ಯವಿಲ್ಲ | ಮಾಹಿತಿ ಲಭ್ಯವಿಲ್ಲ | 73% | |
| | ಕಟ್ಟಡ ಪೂರ್ಣಗೊಂಡ ಪ್ರಮಾಣಪತ್ರ | ಮಾಹಿತಿ ಲಭ್ಯವಿಲ್ಲ | ಮಾಹಿತಿ ಲಭ್ಯವಿಲ್ಲ | 65% | |
| | ವಾಸದ ಪ್ರಮಾಣಪತ್ರ ಪಡೆಯುವಿಕೆ | ಮಾಹಿತಿ ಲಭ್ಯವಿಲ್ಲ | 3% | NA | |
| | ಪ್ರಾರಂಭ ಪ್ರಮಾಣಪತ್ರ ಪಡೆಯುವಿಕೆ | ಮಾಹಿತಿ ಲಭ್ಯವಿಲ್ಲ | 2% | NA | |

ಪ್ರಕ್ರಿಯೆ ಕಾರ್ಯಕ್ಷಮತೆ, ಪಾಲುದಾರರೊಂದಿಗೆ ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ನಿರ್ವಹಣೆಗಳಲ್ಲಿ ಪಟ್ಟಿ ಮಾಡಲಾದ ಮೊದಲ 10 ಉತ್ತಮ ಸೇವೆಗಳನ್ನು ಕೆಳಗಿನ ಕೋಷ್ಟಕದಲ್ಲಿ ಒದಗಿಸಲಾಗಿದೆ:

| ಮೊದಲ 10 ಸೇವೆಗಳು | ಹೆಚ್ಚಿನ ಪ್ರಕ್ರಿಯೆಯ ದಕ್ಷತೆಯನ್ನು ಸೂಚಿಸುವ ಸಕಾಲ ಅನುಸರಣೆ ಅಂಕಗಳಿಗಾಗಿ | ತುಲನಾತ್ಮಕವಾಗಿ ಉನ್ನತ ಮಟ್ಟದ ಮಾಹಿತಿ ತಂತ್ರಜ್ಞಾನ ಸಕ್ರಿಯಗೊಳಿಸುವಿಕೆಯನ್ನು ಸೂಚಿಸುವ NeSDA ಅಂಕಗಳಿಗಾಗಿ | ಪರಿಣಾಮಕಾರಿ ಮಧ್ಯಸ್ಥಗಾರರ ಸಂಪರ್ಕದ ಸೂಚಕ ಅನುಮೋದನೆಯ ಪ್ರಮಾಣಕ್ಕಾಗಿ |
|---|---|---|---|
| 1 | ಭೂಮಿ / ಆಸ್ತಿಯ ನೋಂದಣಿ | ಕಾರ್ಖಾನೆ ಕಟ್ಟಡ ನಕ್ಷೆ ಅನುಮೋದನೆ | FIRMS ಗಳ ನೋಂದಣಿ |
| 2 | ವ್ಯಕ್ತಿಗಳ ಮೇಲಿನ ಕರ್ನಾಟಕ ರಾಜ್ಯದ ತೆರಿಗೆ ಅಡಿಯಲ್ಲಿ ನೋಂದಣಿ ಪೂರೈಕೆ | ಕಾರ್ಖಾನೆಗಳ ನೋಂದಣಿ ಮತ್ತು ಪರವಾನಗಿ ನೀಡುವುದು | ಔಷಧ ನಿಯಂತ್ರಣಗಳ ಮೂಲಕ ಮಾರಾಟಕ್ಕಾಗಿ ಚಿಲ್ಲರೆ ಮಾರಾಟದ ಪರವಾನಗಿ |
| 3 | DMA ನಿಂದ ರಸ್ತೆ ಅಗೆಯುವಿಕೆಗೆ ಅನುಮತಿ | ಬಾಯ್ಲರ್ ಗಳ ನೋಂದಣಿ | ಅಗ್ನಿಶಾಮಕ ಪ್ರಮಾಣಪತ್ರ |
| 4 | ಹಸಿರು ವರ್ಗದಲ್ಲಿ ಅಪಾಯಕಾರಿ ಮತ್ತು ಇತರ ತ್ಯಾಜ್ಯಗಳಿಗೆ ಅಧಿಕೃತ ಅನುಮತಿ(AHOW) | ನೀರಿನ ಹೊಸ ಸಂಪರ್ಕಕ್ಕೆ ಅನುಮತಿ | ವ್ಯಕ್ತಿಗಳ ಮೇಲಿನ ಕರ್ನಾಟಕ ರಾಜ್ಯದ ತೆರಿಗೆ ಅಡಿಯಲ್ಲಿ ನೋಂದಣಿ ಪೂರೈಕೆ |
| 5 | ಗುತ್ತಿಗೆದಾರರ ಪರವಾನಗಿ | ವ್ಯಾಪಾರ ಪರವಾನಗಿ ನೀಡುವುದು | ಸಂಘಗಳ ನೋಂದಣಿ |
| 6 | ಕಟ್ಟಡ ಮತ್ತು ಇತರ ತಟ್ಟಡ ನಿರ್ಮಾಣ ಕಾರ್ಮಿಕರ ಕಾಯಿದೆ ಅಡಿ ನೋಂದಣಿ | ಕಟ್ಟಡ ನಕ್ಷೆ ಮಂಜೂರಾತಿ | DMA ಯಿಂದ ನೀರು ಸರಬರಾಜು ಮತ್ತು ಒಳಚರಂಡಿಗೆ ಅನುಮತಿ |
| 7 | ಕೇಸರಿ ವರ್ಗದ ಕೈಗಾರಿಕೆಗಳಿಗೆ ಅಪಾಯಕಾರಿ ಮತ್ತು ಇತರ ತ್ಯಾಜ್ಯಗಳ ಅಧಿಕೃತ ಅನುಮತಿ ನೀಡಿಕೆ (AHOW) | ಹೆಚ್ಚುವರಿ / ಹೊಸ ಸಂಪರ್ಕಕ್ಕಾಗಿ ಅರ್ಜಿ- LT2 & LT3 | ರಸ್ತೆ ಅಗೆಯುವಿಕೆಗೆ ಅನುಮತಿ ಡಿಎಂಎ |
| 8 | ಹಸಿರು ವರ್ಗದ ಕೈಗಾರಿಕೆಗಳಿಗೆ ಕಾರ್ಯಾಚರಣೆಗಾಗಿ ಅನುಮತಿ (ಸಿಎಫ್‌ಒ) | ನೀರು ಮತ್ತು ಗಾಳಿಯ ಕಾಯ್ದೆಯ ವಿರುದ್ಧ ಅನುಮತಿಗಾಗಿ ಎಲ್ಲಾ KSPCB ಸೇವೆಗಳು | ಕೈಗಾರಿಕಾ ಸ್ಥಾಪನೆಗಳ ಅನುಮೋದನೆಗಳ ಪ್ರವರ್ತನೆ |
| 9 | ಕೇಸರಿ ವರ್ಗದ ಕೈಗಾರಿಕೆಗಳಲ್ಲಿ ಮೂಲಸೌಕರ್ಯ ಯೋಜನೆಗಳನ್ನು ಹೊರತುಪಡಿಸಿ ಸಿಎಫ್‌ಒ | ವಿದ್ಯುತ್ ಅನುಸ್ಥಾಪನೆಯ ನಕ್ಷೆಗಳ ಅನುಮೋದನೆ | ಕೇಸರಿ ವರ್ಗದ ಕೈಗಾರಿಕೆಗಳಿಗೆ ಮೂಲಸೌಕರ್ಯ ಯೋಜನೆಗಳು ಸಿಎಫ್‌ಒ |
| 10 | ಅಂತರ ರಾಜ್ಯ ವಲಸೆ ಕಾರ್ಮಿಕರ ಕಾಯಿದೆಯಡಿ ನೋಂದಣಿ | ಕೈಗಾರಿಕಾ ಸ್ಥಾಪನೆಗಳ ಅನುಮೋದನೆಗಳ ಪ್ರವರ್ತನೆ | ಹಸಿರು ವರ್ಗದ ಕೈಗಾರಿಕೆಗಳಿಗೆ ಕಾರ್ಯಾಚರಣೆಗಾಗಿ ಅನುಮತಿ (ಸಿಎಫ್‌ಒ) |

ಪ್ರಕ್ರಿಯೆ ಕಾರ್ಯಕ್ಷಮತೆ, ಪಾಲುದಾರರೊಂದಿಗೆ ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ನಿರ್ವಹಣೆಗಳಲ್ಲಿ ಪಟ್ಟಿ ಮಾಡಲಾದ ಕೊನೆಯ 10 ಉತ್ತಮ ಸೇವೆಗಳನ್ನು ಕೆಳಗಿನ ಕೋಷ್ಟಕದಲ್ಲಿ ಒದಗಿಸಲಾಗಿದೆ.

| ಕೊನೆಯ 10 ಸೇವೆಗಳು | ಹೆಚ್ಚಿನ ಪ್ರಕ್ರಿಯೆಯ ದಕ್ಷತೆಯನ್ನು ಸೂಚಿಸುವ ಸಕಾಲ ಅನುಸರಣೆ ಅಂಕಗಳಿಗಾಗಿ | ತುಲನಾತ್ಮಕವಾಗಿ ಉನ್ನತ ಮಟ್ಟದ ಮಾಹಿತಿ ತಂತ್ರಜ್ಞಾನ ಸಕ್ರಿಯಗೊಳಿಸುವಿಕೆಯನ್ನು ಸೂಚಿಸುವ NeSDA ಅಂಕಗಳಿಗಾಗಿ | ಪರಿಣಾಮಕಾರಿ ಮಧ್ಯಸ್ಥಗಾರರ ಸಂಪರ್ಕದ ಸೂಚಕ ಅನುಮೋದನೆಯ ಪ್ರಮಾಣಕ್ಕಾಗಿ |
|---|---|---|---|
| 1 | ಬಿಬಿಎಂಪಿ ಯಿಂದ ವಾಸದ ಪ್ರಮಾಣಪತ್ರ ಪಡೆಯುವಿಕೆ | BDAಯಿಂದ ಸ್ವಾಧೀನ ಪ್ರಮಾಣಪತ್ರ ಪಡೆಯುವಿಕೆ | KIADB ಯಿಂದ ಕಟ್ಟಡ ನಕ್ಷೆ ಅನುಮತಿ |
| 2 | ಬಿಬಿಎಂಪಿಯಿಂದ ಪ್ರಾರಂಭ ಪ್ರಮಾಣಪತ್ರ ಪಡೆಯುವಿಕೆ | ವ್ಯಕ್ತಿಗಳ ಮೇಲಿನ ಕರ್ನಾಟಕ ತೆರಿಗೆ ಕಾಯಿದೆ ಅಡಿಯಲ್ಲಿ ನೋಂದಣಿ ಪೂರೈಕೆ | ಕಂದಾಯ ಇಲಾಖೆಯಿಂದ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆ |
| 3 | ಅಗ್ನಿಶಾಮಕ ಪ್ರಮಾಣಪತ್ರ | BBMP ದಿಂದ ರಸ್ತೆ ಅಗೆಯಲು ಅನುಮತಿ | ಹೊಸ ಔಷಧ ಪರವಾನಗಿ ನೀಡಿಕೆ |
| 4 | DMA ಯಿಂದ ಆಸ್ತಿ ಮಾಲೀಕತ್ವದ ಬದಲಾವಣೆ | ಔಷಧ ನಿಯಂತ್ರಣ ಇಲಾಖೆಯಿಂದ ಹೊಸ ಔಷಧಗಳ ಉತ್ಪಾದನಾ ಪರವಾನಗಿಯ ಮಂಜೂರು | ಬಿಬಿಎಂಪಿ ಯಿಂದ ಮರ ಕಡಿಯಲು ಮತ್ತು ಸಾಗಿಸಲು ಅನುಮತಿ |
| 5 | DMA ಯಿಂದ ಕಟ್ಟಡ ಪರವಾನಗಿ ಪೂರೈಕೆ | ಬಿಬಿಎಂಪಿಯಿಂದ ರಸ್ತೆ ಅಗೆಯಲು ಅನುಮತಿ | ಅಂತರ ರಾಜ್ಯ ವಲಸೆ ಕಾರ್ಮಿಕರ ಕಾಯಿದೆಯಡಿ ನೋಂದಣಿ |
| 6 | KIADB ಯಿಂದ ಕಟ್ಟಡ ನಕ್ಷೆ ಮಂಜೂರಾತಿ | ಬಿಬಿಎಂಪಿ ಯಿಂದ ಮರ ಕಡಿಯಲು ಮತ್ತು ಸಾಗಿಸಲು ಅನುಮತಿ | ಎತ್ತರದ ಕಟ್ಟಡಕ್ಕಾಗಿ ಅಗ್ನಿಶಾಮಕದಿಂದ ಎನ್‌ಒಸಿ |
| 7 | DMA ಯಿಂದ ನೀರು ಸರಬರಾಜು ಮತ್ತು ಒಳಚರಂಡಿಗೆ ಅನುಮತಿ | ಅಂತರ ರಾಜ್ಯ ವಲಸೆ ಕಾರ್ಮಿಕರ ಕಾಯಿದೆಯಡಿ ನೋಂದಣಿ | ಹೆಚ್ಚುವರಿ / ಹೊಸ ಸಂಪರ್ಕಕ್ಕಾಗಿ ಅರ್ಜಿ- LT2 & LT3 |
| 8 | ಡಿಎಂಎಯಿಂದ ವ್ಯಾಪಾರ ಪರವಾನಗಿ ಪೂರೈಕೆ | ಸಂಘಗಳ ನೋಂದಣಿ | KIADBಯಿಂದ ಭೂ ಹಂಚಿಕೆ |
| 9 | ಕೆಂಪು ವರ್ಗದ ಕೈಗಾರಿಕೆಗಳಲ್ಲಿ ಅಪಾಯಕಾರಿ ಮತ್ತು ಇತರ ತ್ಯಾಜ್ಯ ಗಳ (AHOW) ಅಧಿಕೃತ ಅನುಮತಿ ಕಾರ | DMA ಯಿಂದ ವ್ಯಾಪಾರ ಪರವಾನಗಿ ಪೂರೈಕೆ | DMA ಯಿಂದ ಕಟ್ಟಡ ಪರವಾನಗಿ ಪೂರೈಕೆ |
| 10 | ಎತ್ತರದ ಕಟ್ಟಡಕ್ಕಾಗಿ ಅಗ್ನಿಶಾಮಕದಿಂದ ಎನ್‌ಒಸಿ | KIADBಯಿಂದ ಭೂ ಹಂಚಿಕೆ | DMA ಯಿಂದ ಆಸ್ತಿ ಮಾಲೀಕತ್ವದ ಬದಲಾವಣೆ |


## ಇತರ ಅವಲೋಕನಗಳು (ಅಂತರ ಇಲಾಖೆ ವಿಶ್ಲೇಷಣೆ ಮತ್ತು ಹೂಡಿಕೆದಾರ ದೃಷ್ಟಿಕೋನ)

ಪ್ರಕ್ರಿಯೆ ಕಾರ್ಯಕ್ಷಮತೆ, ಪಾಲುದಾರರೊಂದಿಗೆ ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ನಿರ್ವಹಣೆಗಳ ನಡುವಿನ ಸಂಬಂಧ/ಸಹಯೋಗಗಳನ್ನು ಅರ್ಥ ಮಾಡಿಕೊಳ್ಳಲು ಹಿಂಚಲನೆ ವಿಶ್ಲೇಷಣೆ (Regression Analysis) ಕೈಗೊಳ್ಳಲಾಯಿತು. ಈ ಇಲಾಖೆಗಳ ನಡುವಿನ ಸಂಬಂಧ/ಸಹಯೋಗ ಅರ್ಥ ಮಾಡಿಕೊಳ್ಳಲು ಮೇಲಿನ ಎಲ್ಲಾ ಮೂರು ಮಾನದಂಡಗಳಿಗೆ ಲಭ್ಯವಿದ್ದ ದತ್ತಾಂಶಗಳ ಸೇವೆಗಳನ್ನು ಅಂದರೆ, 17 ಇಲಾಖೆಗಳ 45 ಸೇವೆಗಳನ್ನು, ಮೌಲ್ಯಮಾಪನಗೊಳಿಸಲಾಯಿತು.

ಪ್ರಕ್ರಿಯೆ ಕಾರ್ಯಕ್ಷಮತೆ (ಸಕಾಲ ಕಾಲಾವಧಿಗೆ ಬದ್ಧವಾಗಿರುವುದನ್ನು ಸೂಚಿಸಲ್ಪಟ್ಟಂತೆ) ಮತ್ತು ಪಾಲುದಾರರರೊಂದಿಗೆ ಸಂಪರ್ಕ (ಅನುಮೋದನೆ ಪ್ರಮಾಣವಾಗಿ ಸೂಚಿಸಲ್ಪಟ್ಟಂತೆ) ನಡುವಿನ ಸಂಬಂಧದ ಅಂಕಿಅಂಶಾತ್ಮಕ ಪ್ರಾಮುಖ್ಯತೆಯನ್ನು ಮೌಲ್ಯಮಾಪನಗೊಳಿಸಲಾಯಿತು. ದೊರೆತ ಫಲಿತಾಂಶಗಳು, ಈ ಎರಡು ಮಾನದಂಡಗಳ ನಡುವೆ ಗಮನಾರ್ಹವಾದ, ಧನಾತ್ಮಕ ಸಹಯೋಗ (Significant Positive Correlation) ಸಂಬಂಧವಿದೆ ಎಂದು ಸೂಚಿಸಿದವು. ಈ ಎರಡು ಮಾನದಂಡಗಳ ನಡುವಿನ ಸಂಬಂಧವನ್ನು ಅನುಮೋದನೆ ಪ್ರಮಾಣ = 0.64 + 0.37 * (ಸಕಾಲ ಕಾಲಮಿತಿ ಅನುಸರಣೆ)ಯ ರೇಖಾತ್ಮಕ ಸಮೀಕರಣದ ಮೂಲಕ ವಿವರಿಸಬಹುದಾಗಿದೆ.

'ಅನುಮೋದನೆ ಪ್ರಮಾಣ' ಮತ್ತು ' ಸಕಾಲಕ್ಕೆ ಬದ್ಧವಾಗಿರುವುದು' ಸಕ್ಷಮ ಸೇವಾ ಪೂರೈಕೆಯನ್ನು ಸೂಚಿಸುತ್ತವೆ. ಮತ್ತೊಂದು ವಿಧದಲ್ಲಿ ಹೇಳುವುದಾದರೆ, ಇಲಾಖೆಯ ವತಿಯಿಂದ ಸೇವೆಗಳ ಪೂರೈಕೆಗೆ ಕೈಗೊಳ್ಳುವ ಯಾವುದೇ ಸುಧಾರಣೆ ಕ್ರಮಗಳು ಮೇಲೆ ತಿಳಿಸಿರುವ ಎರಡೂ ಮಾನದಂಡಗಳ ಮೇಲೆ ಸಾಮಾನ್ಯವಾಗಿ ಸುಧಾರಣೆ ತರುತ್ತವೆ.

ಮೌಲ್ಯಮಾಪನ ಮಾಡಲ್ಪಟ್ಟ ಮತ್ತೊಂದು ಅಂಶವೆಂದರೆ ಅವಲಂಬನೆ ಹಾಗೂ ಸೇವಾ ಪೂರೈಕೆ ಕಾಲಾವಧಿಗಳ ವಿಷಯದಲ್ಲಿ ವಿವಿಧ ಲೈನ್ ಇಲಾಖೆಗಳಲ್ಲಿ ಸಂಬಂಧಿತ ಸೇವೆಗಳ ಸಂಚಿತ ಪರಿಣಾಮಕಾರಿತ್ವ. ಈ ಮೌಲ್ಯಮಾಪನ ಮಾಡಲು ಸನ್ನಿವೇಶಗಳ ವಿಶ್ಲೇಷಣೆ ಬಳಸಲಾಗಿದೆ. ಆ ನಿಟ್ಟಿನಲ್ಲಿ, ಎರಡು ತದ್ವಿರುದ್ಧ ದಿಕ್ಕಿನಲ್ಲಿರುವ (ಕೆಂಪು ಹಾಗೂ ಹಸಿರು ವರ್ಗಗಳು) ಕೈಗಾರಿಕೆಯನ್ನು ಸ್ಥಾಪಿಸಲು ಒಳಗೊಂಡ ಕೆಳಗಿನ ಎರಡು ಸನ್ನಿವೇಶಗಳನ್ನು ಪರಿಗಣಿಸಲಾಯಿತು (ಕೆಳಗಿನ ಚಿತ್ರ ನೋಡಿ).



**ಸನ್ನಿವೇಶ 1: ಕೆಂಪು ವರ್ಗದಲ್ಲಿ , ಅಲ್ಯೂಮಿನಿಯಂ ಸ್ಮೆಲ್ಟರ್‌ಗೆ ,ಉತ್ಪಾದನಾ ಘಟಕವನ್ನು ಸ್ಥಾಪಿಸಲು :**

- ಮರ ಕಡಿಯುವುದು, ಗುತ್ತಿಗೆ ಕಾರ್ಮಿಕರು, ಅಂತರರಾಜ್ಯ ವಲಸಿಗರು ಮತ್ತು ಇತರ ನಿರ್ಮಾಣ ಕಾರ್ಮಿಕರನ್ನು ತೊಡಗಿಸಿಕೊಳ್ಳುವ ಅಗತ್ಯವಿರುತ್ತದೆ
- ಅಗತ್ಯವಿರುವ ವಿದ್ಯುತ್ ಗಾಗಿ ಹೈ-ಟೆನ್ಷನ್ ಮೀಟರ್ ಮತ್ತು ನೀರು ಸರಬರಾಜಿಗೆ ಬಿಡಬ್ಲ್ಯುಎಸ್‌ಎಸ್ ಬಿ ಅನುಮತಿ ಅಗತ್ಯವಿರುತ್ತದೆ

**ಸ್ಥಾಪನೆಗೆ ಪೂರ್ವ ಅವಶ್ಯಕತೆಗಳು**

- ಕೈಗಾರಿಕಾ ಉದ್ಯಮಿಗಳ ನಿವೇದನೆ ಪತ್ರ
- ಆರ್‌ಓಸಿ, ಜಿಎಸ್‌ಟಿ ಮತ್ತು PAN ನೋಂದಣಿ
- ಹೂಡಿಕೆಯ ಪ್ರಮಾಣವನ್ನು ಆಧರಿಸಿ ರಾಜ್ಯ ಸಮಿತಿಯಿಂದ ಅನುಮೋದನೆ

| ಪೂರ್ವ ಸ್ಥಾಪನೆ ಅನುಮತಿಗಳು | ಸಕಾಲ ಕಾಲಮಿತಿ ದಿನಗಳಲ್ಲಿ | 2018-19ರ ಅವಧಿಯಲ್ಲಿ ತೆಗೆದುಕೊಂಡ ಸರಾಸರಿ ಸಮಯ, ದಿನಗಳಲ್ಲಿ |
|---|---|---|
| ಮರ ಕಡಿಯಲು ಅನುಮತಿ | 90 | ಲಭ್ಯವಿಲ್ಲ |
| ಕೆಂಪು ವರ್ಗದಡಿ ಸ್ಥಾಪನೆಗೆ ಅನುಮತಿ | 70 | 134.3 |
| ಬಾಯ್ಲರ್ ನಿರ್ಮಾಣಕ್ಕೆ ಅನುಮೋದನೆ | 90 | 65.4 |

| ಸೇವಾ ಸಂಪರ್ಕಗಳು | ಸಕಾಲ ಕಾಲಮಿತಿ ದಿನಗಳಲ್ಲಿ | 2018-19ರ ಅವಧಿಯಲ್ಲಿ ತೆಗೆದುಕೊಂಡ ಸರಾಸರಿ ಸಮಯ, ದಿನಗಳಲ್ಲಿ |
|---|---|---|
| ಬೆಸ್ಕಾಂ ನಿಂದ ಸೇವಾ ಸಂಪರ್ಕ | 30 | 128.1 |
| BWSSB ಯಿಂದ ಸಂಪರ್ಕ | 42 | 72.6 |
| ವಿದ್ಯುತ್ ನಕ್ಷೆಯ ಅನುಮೋದನೆ | 20 | 40.3 |

| ಕಾರ್ಮಿಕ ಸಂಬಂಧಿತ ಅನುಮತಿಗಳು | ಸಕಾಲ ಕಾಲಮಿತಿ ದಿನಗಳಲ್ಲಿ | 2018-19ರ ಅವಧಿಯಲ್ಲಿ ತೆಗೆದುಕೊಂಡ ಸರಾಸರಿ ಸಮಯ, ದಿನಗಳಲ್ಲಿ |
|---|---|---|
| ಗುತ್ತಿಗೆ ಕಾರ್ಮಿಕರ ಕಾಯಿದೆ ಅಡಿಯಲ್ಲಿ ನೋಂದಣಿ | 15 | 5 |
| ISMW ಕಾಯಿದೆ ಅಡಿಯಲ್ಲಿ ನೋಂದಣಿ | 15 | 10 |
| BOCW ಕಾಯಿದೆ ಅಡಿಯಲ್ಲಿ ನೋಂದಣಿ | 15 | 8 |

| ಕಾರ್ಯಾಚರಣೆಗಳಿಗೆ ಅನುಮತಿ | ಸಕಾಲ ಕಾಲಮಿತಿ ದಿನಗಳಲ್ಲಿ | 2018-19ರ ಅವಧಿಯಲ್ಲಿ ತೆಗೆದುಕೊಂಡ ಸರಾಸರಿ ಸಮಯ, ದಿನಗಳಲ್ಲಿ |
|---|---|---|
| ಕೆಂಪು ವರ್ಗದಲ್ಲಿ ಕಾರ್ಯಾಚರಣೆಗಳಿಗೆ ಅನುಮತಿ | 120 | 191.2 |
| ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟೊರೇಟ್ ನಿಂದ ಅನುಮತಿ | 20 | 42.1 |
| ಕಾರ್ಖಾನೆ ಪರವಾನಗಿ | 90 | 53.8 |

**ಸನ್ನಿವೇಶ 2: ಸಾಫ್ಟ್ ವೇರ್ ಘಟಕ / ಐಟಿಇಎಸ್ / ಬಿಪಿಓ ಸ್ಥಾಪನೆಯು ದಿನಕ್ಕೆ 10 ಕಿಲೋ ಲೀಟರ್ ತ್ಯಾಜ್ಯನೀರನ್ನು ಉತ್ಪಾದಿಸುತ್ತದೆ**

- ಮರ ಕಡಿಯುವುದು, ಗುತ್ತಿಗೆ ಕಾರ್ಮಿಕರು, ಅಂತರರಾಜ್ಯ ವಲಸಿಗರು ಮತ್ತು ಇತರ ನಿರ್ಮಾಣ ಕಾರ್ಮಿಕರನ್ನು ತೊಡಗಿಸಿಕೊಳ್ಳುವ ಅಗತ್ಯವಿರುತ್ತದೆ
- 1 ಮೆಗಾ ವೋಲ್ಟ್ ಆಂಪಿಯರ್ ಡಿಜಿ ಸೆಟ್ನೊಂದಿಗೆ ಅಗತ್ಯವಿರುವ ವಿದ್ಯುತ್‌ಗಾಗಿ BWSSB ನೀರು ಸರಬರಾಜು ಮತ್ತು ಹೈ-ಟೆನ್ಷನ್ ಮೀಟರ್

**ಸ್ಥಾಪನೆಗೆ ಪೂರ್ವ ಅವಶ್ಯಕತೆಗಳು**

- ಕೈಗಾರಿಕಾ ಉದ್ಯಮಿಗಳ ನಿವೇದನ ಪತ್ರ
- ಆರ್‌ಓಸಿ, ಜಿಎಸ್‌ಟಿ ಮತ್ತು ಪ್ಯಾನ್ ನೋಂದಣಿ
- ಹೂಡಿಕೆಯ ಪ್ರಮಾಣವನ್ನು ಆಧರಿಸಿ ರಾಜ್ಯ ಸಮಿತಿಯಿಂದ ಅನುಮೋದನೆ

| ಪೂರ್ವ ಸ್ಥಾಪನೆ ಅನುಮತಿಗಳು | ಸಕಾಲ ಕಾಲಮಿತಿ ದಿನಗಳಲ್ಲಿ | 2018-19ರ ಅವಧಿಯಲ್ಲಿ ತೆಗೆದುಕೊಂಡ ಸರಾಸರಿ ಸಮಯ, ದಿನಗಳಲ್ಲಿ |
|---|---|---|
| ಮರ ಕಡಿಯಲು ಅನುಮತಿ | 90 | ಲಭ್ಯವಿಲ್ಲ |
| ಹಸಿರು ವರ್ಗದಡಿ ಸಂಸ್ಥೆ ಸ್ಥಾಪನೆಗೆ ಅನುಮತಿ | 30 | 32.5 |

| ಸೇವಾ ಸಂಪರ್ಕಗಳು | ಸಕಾಲ ಕಾಲಮಿತಿ ದಿನಗಳಲ್ಲಿ | 2018-19ರ ಅವಧಿಯಲ್ಲಿ ತೆಗೆದುಕೊಂಡ ಸರಾಸರಿ ಸಮಯ, ದಿನಗಳಲ್ಲಿ |
|---|---|---|
| ಬೆಸ್ಕಾಂ ನಿಂದ ಸೇವಾ ಸಂಪರ್ಕ | 30 | 128.1 |
| BWSSB ಯಿಂದ ಸಂಪರ್ಕ | 42 | 72.6 |
| ವಿದ್ಯುತ್ ನಕ್ಷೆಯ ಅನುಮೋದನೆ | 20 | 40.3 |

| ಕಾರ್ಮಿಕ ಸಂಬಂಧಿತ ಅನುಮತಿಗಳು | ಸಕಾಲ ಕಾಲಮಿತಿ ದಿನಗಳಲ್ಲಿ | 2018-19ರ ಅವಧಿಯಲ್ಲಿ ತೆಗೆದುಕೊಂಡ ಸರಾಸರಿ ಸಮಯ, ದಿನಗಳಲ್ಲಿ |
|---|---|---|
| ಗುತ್ತಿಗೆ ಕಾರ್ಮಿಕರ ಕಾಯಿದೆ ಅಡಿಯಲ್ಲಿ ನೋಂದಣಿ | 15 | 5 |
| ISMW ಕಾಯಿದೆ ಅಡಿಯಲ್ಲಿ ನೋಂದಣಿ | 15 | 10 |
| BOCW ಕಾಯಿದೆ ಅಡಿಯಲ್ಲಿ ನೋಂದಣಿ | 15 | 8 |

| ಕಾರ್ಯಾಚರಣೆಗಳಿಗೆ ಒಪ್ಪಿಗೆ | ಸಕಾಲ ಕಾಲಮಿತಿ ದಿನಗಳಲ್ಲಿ | 2018-19ರ ಅವಧಿಯಲ್ಲಿ ತೆಗೆದುಕೊಂಡ ಸರಾಸರಿ ಸಮಯ, ದಿನಗಳಲ್ಲಿ |
|---|---|---|
| ಹಸಿರು ವರ್ಗದ ಕೈಗಾರಿಕೆಗಳಿಗೆ ಕಾರ್ಯಾಚರಣೆಗಳಿಗೆ ಅನುಮತಿ | 120 | 28 |
| ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟೊರೇಟ್ ನಿಂದ ಅನುಮತಿ | 20 | 42.1 |
| ಅಂತಿಮ NOC | 60 | 123 |

ಕರ್ನಾಟಕದಲ್ಲಿ ಒಂದು ಘಟಕವನ್ನು ಸ್ಥಾಪಿಸುವುದಕ್ಕಾಗಿ ಮೇಲೆ ಪರಿಗಣಿಸಲಾಗಿರುವ ಪರಿಸ್ಥಿತಿಗಳನ್ನು ನಾಲ್ಕು ಹಂತಗಳಲ್ಲಿ ವರ್ಗೀಕರಿಸಿ, ಈ ಹಂತಗಳಲ್ಲಿ ಏರ್ಪಟ್ಟ ಯಾವುದೇ ವಿಳಂಬಗಳಾಗಿ ಗಮನಿಸಲಾದ ಫಲಿತಾಂಶಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

| ಕೆಳಗಿನ ಹಂತಗಳಲ್ಲಿ ಗಮನಿಸಲಾದ ವಿಳಂಬ (ಇದ್ದ ಪಕ್ಷದಲ್ಲಿ) | ಸನ್ನಿವೇಶ 1 ರಲ್ಲಿ (ದಿನಗಳಲ್ಲಿ) | ಸನ್ನಿವೇಶ 2 ರಲ್ಲಿ (ದಿನಗಳಲ್ಲಿ) | ಸಂಬಂಧಪಟ್ಟ ಇಲಾಖೆಗಳು |
|---|---|---|---|
| ಸ್ಥಾಪನೆ ಪೂರ್ವ ಪರವಾನಗಿಗಳು | 44.3 | 2.5 | ಡಿ.ಎಮ್.ಎ/.ಬೃ.ಬೆಂ.ಮ.ಪಾ., ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ, ಕಾರ್ಖಾನೆಗಳ ಇಲಾಖೆಗಳು |
| ಸೇವಾ ಸಂಪರ್ಕಗಳು | 86.1 | 86.1 | ಎಸ್ಕಾಂ, ಬಿ.ಡಬ್ಲ್ಯು.ಎಸ್.ಎ.ಸ್.ಬಿ ಎಲೆಕ್ಟ್ರಿಕಲ್ ಇನ್ಸ್ ಪೆಕ್ಟೊರೇಟ್ ಇಲಾಖೆಗಳು |
| ಕಾರ್ಮಿಕತೆ ಸಂಬಂಧಿತ ಪರವಾನಗಿಗಳು | ವಿಳಂಬವಿಲ್ಲ | ವಿಳಂಬವಿಲ್ಲ | ಕಾರ್ಮಿಕ ಇಲಾಖೆ |
| ಕಾರ್ಯಾಚರಣೆಗೆ ಅನುಮತಿ | 71.2 | 3 | ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ, ಎಲೆಕ್ಟ್ರಿಕಲ್ ಇನ್ಸ್ ಪೆಕ್ಟೊರೇಟ್ ಕಾರ್ಖಾನೆಗಳ ಇಲಾಖೆಗಳು |

ವಿಳಂಬಕ್ಕೆ ಕಾರಣವಾದ ಇಲಾಖೆಗಳನ್ನು ಕೆಂಪು ಅಕ್ಷರಗಳಿಂದ

ಎರಡೂ ಪರಿಸ್ಥಿತಿಗಳಲ್ಲೂ ಗಣನೀಯ ವಿಳಂಬಗಳನ್ನು, ಅಂದರೆ, ರಾಜ್ಯದಲ್ಲಿ ಉತ್ಪಾದನೆ ಅಥವಾ ಸೇವಾ ಘಟಕವನ್ನು ಸ್ಥಾಪಿಸುವ ನಾಲ್ಕು ಹಂತಗಳ ಪೈಕಿ ಮೂರು ಹಂತಗಳಲ್ಲಿ ವಿಳಂಬಗಳನ್ನು ಗಮನಿಸಲಾಯಿತು. ಮೇಲಾಗಿ, ಸೇವೆಗಳ ಘಟಕವನ್ನು ಸ್ಥಾಪಿಸುವಲ್ಲಿ ಗಮನಿಸಲಾದ ವಿಳಂಬಗಳಿಗೆ ಹೋಲಿಸಿದರೆ, ಉತ್ಪಾದನಾ ಘಟಕದ ಸ್ಥಾಪನೆಯ ಸಂದರ್ಭಗಳಲ್ಲಿ ಸುಮಾರು 50%ರಷ್ಟು ವಿಳಂಬವನ್ನು ಗಮನಿಸಲಾಯಿತು.

ಬೆಸ್ಕಾಂ, ವಿದ್ಯುತ್ ಪರಿವೀಕ್ಷಣಾಲಯ, ಕ.ರಾ.ಮಾ.ನಿ.ಮಂ., ಕರ್ನಾಟಕ ರಾಜ್ಯ ಅಗ್ನಿಶಾಮಕ ದಳ, ಹಾಗು ಬೆ.ನೀ.ಸ.ಒ.ಚ.ಮಂ.ಯಂತಹ ಲೈನ್ (ಮಾರ್ಗ) ಇಲಾಖೆಗಳು ತಮ್ಮ ಪ್ರಕ್ರಿಯೆಗಳನ್ನು ಸುವ್ಯವಸ್ಥಿತಗೊಳಿಸಿ ಅನುಮೋದನೆಗಳನ್ನು ತ್ವರಿತಗೊಳಿಸಿದರೆ ಈ ವಿಳಂಬಗಳನ್ನು ತಡೆಗಟ್ಟಬಹುದು. ಕೆಂಪು ವರ್ಗದ ಉದ್ದಿಮೆಗಳ ಸಂದರ್ಭದಲ್ಲಿ, ಉದ್ಯಮದ ಸ್ಥಾಪನೆಯ ಸಾಧಕಬಾಧಕಗಳನ್ನು ಪರಿಗಣಿಸುವುದಕ್ಕೆ ಕ.ರಾ.ಮಾ.ನಿ.ಮಂ.ಗೆ ಹೆಚ್ಚು ಸಮಯ ಬೇಕಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ಆದರೆ, ಹಸಿರು ವರ್ಗದ ಉದ್ದಿಮೆಗಳಿಗೆ ಒಪ್ಪಿಗೆ ನೀಡುವಾಗಲೂ ಕೂಡ ವಿಳಂಬಗಳನ್ನು ಗಮನಿಸಲಾಗಿದೆ.

ರಾಜ್ಯದ ನಾಲ್ಕು ವಿಭಾಗಗಳಾದ್ಯಂತ ನಡೆಸಲಾದ ಉದ್ಯಮ ಭಾಗೀದಾರರ ಪರಸ್ಪರ ಸಂವಾದದಿಂದ ಪಡೆದುಕೊಂಡ ಶೋಧಗಳಿಂದ ಸಂಬಂಧಿತ ಇಲಾಖೆಗಳಿಂದ ಆದ ಮೇಲಿನ ವಿಳಂಬಗಳ ಗಮನಿಕೆಗಳು, ಇನ್ನಷ್ಟು ಬಲಪಡೆದುಕೊಳ್ಳುತ್ತದೆ ಮತ್ತು ದೃಢೀಕರಿಸಲ್ಪಡುತ್ತವೆ. ಈ ಪರಸ್ಪರ ಸಂವಾದಗಳಿಂದ ಬಂದ ಕೆಲವು ಪ್ರಮುಖ ಶೋಧಗಳನ್ನು ಕೆಳಗೆ ಸಂಕ್ಷಿಪ್ತವಾಗಿ ತಿಳಿಸಲಾಗಿದೆ:

- ರಾಜ್ಯದ ಏಕಗವಾಕ್ಷಿ ಹಾಗೂ ಜಿಲ್ಲಾ ಮಟ್ಟದಲ್ಲಿನ ಅದರ ಪ್ರತಿರೂಪಗಳು, ವಿಕೇಂದ್ರೀಕೃತ ವಿಧದಲ್ಲಿ ಕಾರ್ಯನಿರ್ವಹಿಸುತ್ತವೆ. ಜಿಲ್ಲಾ ಕೈಗಾರಿಕಾ ಕೇಂದ್ರಗಳು ಗಣನೀಯ ಪ್ರಮಾಣದ ಸ್ವಾಯತ್ತತೆಯನ್ನು ಅನುಭವಿಸುತ್ತವೆ. ಈ ಸ್ವರೂಪಕ್ಕೆ ತನ್ನದೇ ಆದ ದೃಷ್ಟಿಕೋನವಿದ್ದರೂ, ಮತ್ತೊಂದು ದಿಕ್ಕಿನಿಂದ ನೋಡಿದಾಗ, ಈ ಜಿಲ್ಲಾ ಕೈಗಾರಿಕಾ ಕೇಂದ್ರಗಳು ಕಾರ್ಯನಿರ್ವಹಿಸುವ ವಿಧಾನದಲ್ಲಿ, ಜಿಲ್ಲೆಗಳಾದ್ಯಂತ ಅಧಿಕ ಮಟ್ಟದ ವ್ಯತ್ಯಾಸಕ್ಕೆ ಕಾರಣವಾಗುತ್ತಿವೆ. ನಮ್ಮ ಸಮೂಹ ಚರ್ಚೆಗಳಲ್ಲಿ ಉದ್ಯಮ ಪ್ರತಿನಿಧಿಗಳು ಎತ್ತಿತೋರಿಸಿದಂತೆ, ಅನೇಕ ವೇಳೆ ಇದು ಅಸ್ಪಷ್ಟತೆ ಮತ್ತು ಅಸಂಗತ ಸೇವಾ ಮಾನದಂಡಗಳಿಗೆ ಎಡೆಮಾಡಿಕೊಡುತ್ತದೆ.
- ರಾಜ್ಯದ ಏಕಗವಾಕ್ಷ (KUM) ಮತ್ತು ಮಾಪಿಸಲಾದ ಸಮಾನಾಂತರ ಇಲಾಖೆಗಳು ಇನ್ನೂ ಹೆಚ್ಚು ಒಗ್ಗಟ್ಟಾಗಿ, ಅದರಲ್ಲೂ ವಿಶೇಷವಾಗಿ, ಉದ್ಯಮ ಸಂಬಂಧಿತ ಸೇವೆಗಳ ವಿಷಯದಲ್ಲಿ ಒಗ್ಗಟ್ಟಾಗಿ ಕಾರ್ಯನಿರ್ವಹಿಸುವ ಅಗತ್ಯವಿದೆ. ಈಗ ಹೇಳುವುದಾದರೆ, KUM ನಿಂದ ಮುಂದುವರಿಯಲು ಆದೇಶ ಬಂದ ನಂತರವೂ ಅನುಮೋದನೆಗಾಗಿ ಹೂಡಿಕೆದಾರರು ವೈಯಕ್ತಿಕವಾಗಿ ತತ್ಸಂಬಂಧಿತ ಲೈನ್ ಇಲಾಖೆಗಳಲ್ಲಿ ಅನುಸರಣೆ ಮಾಡುತ್ತಿರಬೇಕು. ಇಂತಹ ಶೋಧಗಳು, ಅಭಿಪ್ರಾಯ ಸಮೀಕ್ಷೆಯಿಂದ ಇನ್ನಷ್ಟು ದೃಢಪಟ್ಟಿದ್ದು, ಬಹುತೇಕ ಹೂಡಿಕೆದಾರರು (ಅಂದರೆ 80%), ರಾಜ್ಯದಲ್ಲಿ ಹೂಡಿಕೆದಾರ ಸೇವೆಗಳನ್ನು ಪಡೆದುಕೊಳ್ಳುವ ಸಲುವಾಗಿ ಲೈನ್ ಇಲಾಖೆಗಳಿಗೆ ಬಹುತೇಕವಾಗಿ (ಅಂದರೆ 78%) ಆಫ್‌ಲೈನ್ ವಾಹಿನಿಗಳ ಮೂಲಕ ಅವುಗಳನ್ನು ತಲುಪಬೇಕು ಎಂದು ಅಭಿಪ್ರಾಯ ಪಟ್ಟಿದ್ದಾರೆ.
- ನಿರ್ದಿಷ್ಟವಾಗಿ, ರಾಜ್ಯದಲ್ಲಿ ಒಂದು ನಕ್ಷೆಯ ಭೂಮಿ ಮತ್ತು ನಿರ್ಮಾಣ ಸಂಬಂಧಿತ ಅನುಮೋದನೆಗಳಿಗೆ, ತತ್ಸಂಬಂಧಿತ ಹೂಡಿಕೆದಾರರು, ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಂದು ಹಂತದ ಏಕಗವಾಕ್ಷ ವ್ಯವಸ್ಥೆಯ ನೋಡಲ್ ಅಧಿಕಾರಿ (ಡಿಐಸಿ) ಮೂಲಕ ಹೋಗುವ ಬದಲು, ಇದರಲ್ಲಿ ಒಳಗೊಂಡ ವಿವಿಧ ಲೈನ್ ಇಲಾಖೆಗಳ ಅನುಸರಣೆ ಮಾಡಬೇಕಾಗುತ್ತದೆ. ಇದರಿಂದ ಅಡಿಪಾಯ ಮಟ್ಟದಲ್ಲಿ ನಕ್ಷೆಯ ಅನುಷ್ಠಾನದಲ್ಲಿ ಗಣನೀಯ ವಿಳಂಬವೇರ್ಪಡುತ್ತದೆ. ನಿರ್ದಿಷ್ಟ ಸೇವೆಗಳ ಒದಗಣೆಯಲ್ಲಿ ಈ ಕೆಲವು ವಿಳಂಬಗಳು ಅಥವಾ ತತ್ಸಂಬಂಧಿತ ಸೇವೆಗಳ ಒದಗಣೆಯಲ್ಲಿ ಸಂಚಿತ ವಿಳಂಬಗಳನ್ನು ಈ ವಿಭಾಗದಲ್ಲಿ ಈ ಮೊದಲೇ ಎತ್ತಿ ತೋರಿಸಲಾಗಿದೆ (ಪುಟ 13ರಿಂದ 17ರವರೆಗೆ ನೋಡಿ).
- ಏಕಗವಾಕ್ಷ ವ್ಯವಸ್ಥೆಯ ಮೂಲಕ ಉದ್ಯಮಕ್ಕೆ ನೀಡುವ ಕೇಂದ್ರೀಕೃತ ಅನುಮೋದನೆ / ನಿರಾಕ್ಷೇಪಣಾ ಪ್ರಮಾಣಪತ್ರ ತಡೆರಹಿತವಾಗೇನೂ ಇಲ್ಲ ಮತ್ತು ಅರ್ಜಿದಾರರು ಇತರ ಇಲಾಖೆಗಳನ್ನು ಅನೇಕಬಾರಿ ಅನುಸರಣೆ ಮಾಡಬೇಕಾಗುತ್ತದೆ.
- ಯಾವುದೇ ಗಣನೀಯ ವಿಳಂಬಗಳು ಬೆಲೆ ಏರಿಕೆಯಲ್ಲಿ, ಉದಾಹರಣೆಗೆ, ಹಂಚಿಕೆ ದರ ಹೆಚ್ಚಳಕೆಯಲ್ಲಿ ಅಂತ್ಯಗೊಂಡು, ಕೆಲವೊಮ್ಮೆ ನಕ್ಷೆಗಳನ್ನು ಅಸಾಧ್ಯಗೊಳಿಸ ಬಹುದಾದ್ದರಿಂದ, ರಾಜ್ಯ ಸಂಸ್ಥೆಗಳು ಭೂಮಿಯ ಹಂಚಿಕೆಯನ್ನು ತ್ವರಿತಗೊಳಿಸುವ ಅಗತ್ಯವಿದೆ ಎಂದು ಹೂಡಿಕೆದಾರರು ಅಭಿಪ್ರಾಯಪಟ್ಟರು.
- ಹೂಡಿಕೆದಾರರ ಕುಂದುಕೊರತೆಗಳ ಪರಿಹಾರಕ್ಕಾಗಿ ಇರುವಂತಹ ಡಿಐಸಿ ಅಥವಾ ನೋಡಲ್ ಅಧಿಕಾರಿಗಳು ಮುಂತಾದ ತಾಲ್ಲೂಕು ಅಥವಾ ಜಿಲ್ಲಾ ಮಟ್ಟದ ಕಚೇರಿಗಳಿಂದ ಹಿಡಿದು ಲೈನ್

ಇಲಾಖೆಗಳವರೆಗೆ, ಈ ಕಚೇರಿಗಳಲ್ಲಿ ಇಂತಹ ಪ್ರಕ್ರಿಯೆಗಳಿಗಾಗಿ ಅತ್ಯಲ್ಪ ಡಿಜಿಟೀಕರಣ ಅಥವಾ ಡಿಜಿಟಲೀಕರಣವೇ ಇಲ್ಲದೆ ತಡೆತಡೆದು ಕಾರ್ಯನಿರ್ವಹಿಸುತ್ತಿವೆ.

- ಕರ್ನಾಟಕ ಉದ್ಯೋಗ ಮಿತ್ರ/ಜಿಲ್ಲಾ ಕೈಗಾರಿಕಾ ಕೇಂದ್ರಗಳು, ಕಾರ್ಯಾಗಾರಗಳು, ಸಮಾವೇಶ ಇತ್ಯಾದಿಗಳ ಮೂಲಕ ಸೂಕ್ಷ್ಮ, ಸಣ್ಣ ಹಾಗು ಮಧ್ಯಮಗಾತ್ರದ ಉದ್ದಿಮೆಗಳನ್ನು (ಎಮ್ಎಸ್ಎಮ್ಇ) ತೊಡಗಿಸಿಕೊಂಡು ಅವುಗಳೊಂದಿಗಿನ  ಸಹಯೋಗಗಳನ್ನು ಉತ್ತಮಗೊಳಿಸಿಕೊಳ್ಳುವ ಅಗತ್ಯವಿದೆ.


ರಾಜ್ಯದಲ್ಲಿ ಹೂಡಿಕೆದಾರರ ಪೈಕಿ ನಡೆಸಲಾದ ಹೂಡಿಕೆದಾರ ಅಭಿಪ್ರಾಯ ಸಮೀಕ್ಷೆಯ ಪ್ರಮುಖ ಗಮನಿಕೆಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ:

- ಕರ್ನಾಟಕ ಉದ್ಯೋಗ ಮಿತ್ರ/ಜಿಲ್ಲಾ ಕೈಗಾರಿಕಾ ಕೇಂದ್ರಗಳು ಒದಗಿಸುವ ಹೂಡಿಕೆದಾರ ಸೇವೆಗಳ ಬಗೆಗಿನ  ಕಾರ್ಯಾಚರಣೆಗಳ ಕುರಿತು ಹೂಡಿಕೆದಾರರಲ್ಲಿ ಕಡಿಮೆ ಅರಿವು (ಅಂದರೆ 55%).
- ಹೂಡಿಕೆದಾರರಲ್ಲಿ ಇಬಿಜ್ ಪೋರ್ಟಲ್‌ನ ಕಡಿಮೆ ಬಳಕೆ ಯನ್ನು (ಅಂದರೆ 10%) ಗಮನಿಸಲಾಗಿದೆ ಮತ್ತು ರಾಜ್ಯದಲ್ಲಿ ಕೇವಲ 37% ಮಾತ್ರ ಕರ್ನಾಟಕ ಉದ್ಯೋಗ ಮಿತ್ರ/ಜಿಲ್ಲಾ ಕೈಗಾರಿಕಾ ಕೇಂದ್ರಗಳ ಸೇವೆಗಳನ್ನು ಬಳಸಿಕೊಂಡಿದ್ದಾರೆ.
- ಬಹುತೇಕ ಸೇವೆಗಳನ್ನು ಆನ್‌ಲೈನ್‌ನಲ್ಲಿ ಮಾಪಿಸಲಾಗಿದ್ದರೂ, ಅನೇಕ ಹೂಡಿಕೆದಾರರಿಗೆ ತಾವು ಈ ಸೇವೆಗಳನ್ನು ಆನ್‌ಲೈನ್‌ನಲ್ಲೂ ಕೂಡ ಪಡೆದುಕೊಳ್ಳಬಹುದು ಎಂಬುದರ ಅರಿವಿರಲಿಲ್ಲ ಎಂಬುದು ತಿಳಿದುಬರುತ್ತದೆ. ಪರ್ಯಾಯವಾಗಿ, ಅವರುಗಳು ಈ ಪೋರ್ಟಲ್‌ಗಳು ಅಷ್ಟು ಬಳಕೆದಾರ ಸ್ನೇಹಿಯಲ್ಲ ಎಂದೂ ಕೂಡ ಭಾವಿಸಿರಬಹುದು (ಕೆಲವು ಸೇವೆಗಳಿಗೆ NeSDA ಸ್ಕೋರ್ ಸೂಚಿಸುವಂತೆ). ಇದಕ್ಕೆ ಕಾರಣವೆಂದರೆ, ಅವರಲ್ಲಿ ಬಹುತೇಕ ಮಂದಿ (ಅಂದರೆ, 80%) ತಾವುಗಳು ಉದ್ಯಮ ಸೇವೆಗಳನ್ನು ಆಫ್‌ಲೈನ್ ವಾಹಿನಿಗಳ  ಮೂಲಕ ಪಡೆದುಕೊಂಡಿರುವುದಾಗಿ ತಿಳಿಸಿದ್ದಾರೆ.
- ಬಹುತೇಕ ಹೂಡಿಕೆದಾರರು, (ಅಂದರೆ 78%) ರಾಜ್ಯದಲ್ಲಿ 'ಸಕಾಲ'ವು ಹೂಡಿಕೆದಾರರಿಗೆ ಸೇವೆಯ ಸರಬರಾಜನ್ನು ತ್ವರೆಗೊಳಿಸಿಲ್ಲ ಎಂದು ಅಭಿಪ್ರಾಯಪಟ್ಟರು. ಮಾಪಿಸಲಾದ ಬಹುತೇಕ ಸೇವೆಗಳು/ಲೈನ್ ಇಲಾಖೆಗಳಲ್ಲಿ 'ಸಕಾಲ'ವನ್ನು ಅನುಸರಿಸುವ ಕಾಲಗಳು ಕಡಿಮೆಯಾಗಿದ್ದುದು ಇದಕ್ಕೆ ಕಾರಣವಿರಬಹುದು. ಆ.ಪ್ರ ಹಾಗುಉ.ಪ್ರ.ದಂತಹ ರಾಜ್ಯಗಳಲ್ಲಿ ಸಕಾಲ ಕಾಲಮಿತಿಗಳು, ಅಧಿಸೂಚಿಸಲಾಗಿದ್ದ ಸೇವಾ ಒದಗಣೆ ಕಾಲಮಿತಿಗಳಿಗಿಂತ 2ರಿಂದ 10 ಪಟ್ಟು ಅಧಿಕವಾಗಿದ್ದುದೂ ಕೂಡ ಇದಕ್ಕೆ ಕಾರಣವಾಗಿದ್ದಿರಬಹುದು. (ಹೋಲಿಕೆಗೆ ಪುಟ 128 ನೋಡಿ).


## ಹೂಡಿಕೆದಾರರ ಅಭಿಪ್ರಾಯ ಸಮೀಕ್ಷೆಯ ಸಂಶೋಧನೆಗಳು

**ಪ್ರತಿಕ್ರಿಯೆಗಳ ಸಂಖ್ಯೆ: 51**


**KUM / DIC ನೀಡುವ EoDB ಕ್ರಿಯಾತ್ಮಕತೆಯ ಬಗ್ಗೆ ಹೂಡಿಕೆದಾರರ ಅರಿವು**





**ಹೂಡಿಕೆದಾರರ ಸೇವೆಗಳನ್ನು ಪಡೆಯಲು eBiz ಪೋರ್ಟಲ್ ಬಳಕೆ**





**KUM / DIC ಯಿಂದ ಹೂಡಿಕೆದಾರರ ಸೇವೆಗಳ ವಿತರಣೆ**





**ಲೈನ್ ಇಲಾಖೆಗಳಿಂದ ಹೂಡಿಕೆದಾರರ ಸೇವೆಗಳ ವಿತರಣೆ**




**ಲೈನ್ ಇಲಾಖೆಗಳಿಂದ ಹೂಡಿಕೆದಾರರ ಸೇವೆಗಳ ಆಫ್‌ಲೈನ್ ವಿತರಣೆ**




**ಸಕಾಲ ಹೂಡಿಕೆದಾರರ ಸೇವೆಗಳ ವಿತರಣೆಯನ್ನು ಚುರುಕುಗೊಳಿಸುತ್ತದೆ**




ಇ-ಸೇವೆ ಪೂರೈಕೆ ಸೇರಿದಂತೆ, ಸೇವಾ ಪೂರೈಕೆಯ ಸುಧಾರಣೆಗೆ ಎಲ್ಲಾ ಸಂಬಂಧಿತ ಇಲಾಖೆಗಳಿಗೆ ಶಿಫಾರಸ್ಸುಗಳನ್ನು ಈ ವರದಿಯಲ್ಲಿ ನಂತರದ ಪುಟಗಳಲ್ಲಿ ವಿವರಿಸಲಾಗಿದೆ. ಕೆಲವು ಮುಖ್ಯ ಶಿಫಾರಸ್ಸುಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ:

1) ಬಹುತೇಕ ಇಲಾಖೆಗಳೊಂದಿಗಿನ ಮಾತುಕತೆಗಳನ್ನು ಅವಲೋಕಿಸಿದರೆ, ಪ್ರಕ್ರಿಯೆಯನ್ನು ಸಾಕಷ್ಟು ಸರಿಯಾಗಿ ಅರ್ಥಮಾಡಿಕೊಳ್ಳದಿರುವುದು ಅಥವಾ ಅರ್ಜಿದಾರರು ಅವಶ್ಯವಾದ ದಾಖಲೆಗಳನ್ನು ಸಮರ್ಪಕವಾಗಿ ಸಲ್ಲಿಸದಿರುವ ಕಾರಣ ಅನುಮೋದನೆಯಲ್ಲಿ ವಿಳಂಬವಾಗುವ ಅನೇಕ ನಿದರ್ಶನಗಳಿರುವುದನ್ನು ಸೂಚಿಸುತ್ತದೆ. ಆನ್ ಲೈನ್ ಮಾರ್ಗದರ್ಶನ ಹಾಗೂ ಇಲಾಖಾ ಕಚೇರಿಗಳಲ್ಲಿ ಭೌತಿಕ ಹೆಲ್ಪ್ ಡೆಸ್ಕ್ ಮೂಲಕ ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಅರ್ಜಿದಾರರು ಸರಿಯಾಗಿ ಮಾಡಿಕೊಳ್ಳುವಂತೆ ಮಾಡುವ ಮೂಲಕ ಇದನ್ನು ಪರಿಹರಿಸಬಹುದು.
2) ವಾಸ್ತುಶಿಲ್ಪಾತ್ಮಕ ಡ್ರಾಯಿಂಗ್/ನಕ್ಷೆಗಳ ಅನುಮೋದನೆ ಬೇಕಾಗುವ ಸೇವೆಗಳಲ್ಲಿ ಸಕಾಲ ಕಾಲಮಿತಿಯ ಅನುಸರಣೆ ಪ್ರಮಾಣ ಗಮನಾರ್ಹವಾಗಿ ಕಡಿಮೆ ಇರಲು ಕಾರಣವೆಂದರೆ ಅರ್ಜಿದಾರ ಹಾಗೂ ವಿವಿಧ ಇಲಾಖೆಗಳ ನಡುವೆ ಅನೇಕ ಬಾರಿ ಸಂವಹನ. ಅನುಸರಣೆ ವರದಿ (ಆಂ.ಪ್ರ. ಕಾರ್ಖಾನೆಗಳ ಇಲಾಖೆ ಅನುಷ್ಠಾನ ತಂದಿರುವಂತಹದ್ದು) ಒದಗಿಸಲು ಕಟ್ಟಡ ನಕ್ಷೆಗಳ ಆಟೋ ಕ್ಯಾಡ್ ಡ್ರಾಯಿಂಗ್‌ಗಳನ್ನು ವಿಶ್ಲೇಷಿಸುವ ಒಂದು ಸ್ವಯಂಚಾಲಿತ ವ್ಯವಸ್ಥೆ ಇದ್ದರೆ ಸಹಾಯಕವಾಗುತ್ತದೆ.
3) ತಪಾಸಣೆ / ತನಿಖೆಗಳು ಪ್ರಕ್ರಿಯೆಯ ಪ್ರಗತಿಯನ್ನು ವಿಳಂಬಗೊಳಿಸುತ್ತಿರುವ ಸಂದರ್ಭಗಳಲ್ಲಿ, ವಿವೇಚನಾಯುಕ್ತ ಸ್ವಯಂ-ಪ್ರಮಾಣೀಕರಣ ಹಾಗೂ ಸ್ವಯಂಚಾಲಿತ ನವೀಕರಣ ವ್ಯವಸ್ಥೆ ಇದ್ದರೆ, ಸಮಸ್ಯೆ ಬಗೆಹರಿಯಬಹುದು.
4) ನಿಗದಿಪಡಿಸಿದ ಕಾಲಮಿತಿಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಲ್ಲಿ ಸಕಾಲ ಮಿಷನ್ / ಕರ್ನಾಟಕ ಉದ್ಯೋಗ ಮಿತ್ರಗೆ ಹೆಚ್ಚಿನ ಅಧಿಕಾರ ನೀಡಿದಲ್ಲಿ ವ್ಯಾಪಾರ ಅನುವುಮಾಡಿಕೊಡುವ ನಿಯಮಗಳನ್ನು (ಸಕಾಲ) ಬಲಪಡಿಸಬಹುದು.

5) ಕರ್ನಾಟಕ ಉದ್ಯೋಗ ಮಿತ್ರ, ಜಿಲ್ಲಾ ಕೈಗಾರಿಕಾ ಕೇಂದ್ರ ಹಾಗೂ ಸಂಬಂಧಪಟ್ಟ ಲೈನ್ ಇಲಾಖೆಗಳು ಹೆಚ್ಚು ನಿಕಟವಾಗಿ ಕಾರ್ಯ ಮಾಡಬೇಕು ಹಾಗೂ ಹೂಡಿಕೆದಾರರಿಗೆ ತಮ್ಮ ಸೇವೆಗಳನ್ನು ಏಕೀಕೃತ, ಸಂಯೋಜಿತ, ಆನ್ ಲೈನ್ ಪೋರ್ಟಲ್ ಮೂಲಕ ಒದಗಿಸಬೇಕು. ಆಂ.ಪ್ರ.ದ ಏಕ ಗವಾಕ್ಷಿಯಂತಹ ವ್ಯವಸ್ಥೆಯ ಹಾಗೆ, ಕೈಗಾರಿಕೆಗಳಿಗೆ ಸಂಬಂಧಿಸಿದ ಎಲ್ಲಾ ಸೇವೆಗಳನ್ನು ಸಂಯೋಜಿತವಾಗಿ ಒದಗಿಸುವ ಒಂದು ಪೋರ್ಟಲ್, ಒಂದು ಇ–ಮೇಲ್ ಹಾಗೂ ಒಂದು ಸಹಾಯವಾಣಿ ಸಂಖ್ಯೆಯನ್ನು ಅಳವಡಿಸಿಕೊಳ್ಳಬಹುದು. ಕರ್ನಾಟಕ ಉದ್ಯೋಗ ಮಿತ್ರದ ಪೋರ್ಟಲ್, ವಿಜಾರ್ಡ್ ಹಾಗೂ ಚಾಟ್‌ಬಾಟ್‌ಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾದರೆ ಹೂಡಿಕೆದಾರರಿಗೆ ಸರಿಯಾದ ಮಾಹಿತಿ ಕ್ಷಿಪ್ರವಾಗಿ ಸಿಗಲು ಸಹಾಯಕವಾಗಬಹುದು.

6) ಕರ್ನಾಟಕ ಉದ್ಯೋಗ ಮಿತ್ರ ಅಥವಾ ಜಿಲ್ಲಾ ಕೈಗಾರಿಕಾ ಕೇಂದ್ರ ಆಗಿರಲಿ ಅಥವಾ ಕೈಗಾರಿಕಾ ಸಂಬಂಧಿತ ಸೇವೆಗಳನ್ನು ಒದಗಿಸುವ ಲೈನ್ ಇಲಾಖೆಗಳಾಗಲಿ ಹೂಡಿಕೆದಾರರ ಕುಂದುಕೊರತೆಗಳನ್ನು ಪರಿಹರಿಸುವಲ್ಲಿ ಕರ್ನಾಟಕ ಉದ್ಯೋಗ ಮಿತ್ರ, ಕೇಂದ್ರೀಕೃತ ವ್ಯವಸ್ಥೆ(ಹಾಟ್‌ಲೈನ್ ಒಳಗೊಂಡಂತೆ) ರೂಪಿಸಬಹುದು. ಜೊತೆಗೆ, ಆಂಧ್ರ ಪ್ರದೇಶದ ಏಕಗವಾಕ್ಷಿ ಗವರ್ನೆನ್ಸ್ ಸೆಲ್ ಹಾಗೆ ಕರ್ನಾಟಕ ಉದ್ಯೋಗ ಮಿತ್ರ / ಜಿಲ್ಲಾ ಕೈಗಾರಿಕಾ ಕೇಂದ್ರಗಳು ಕೈಗಾರಿಕಾ ಸಂಘಸಂಸ್ಥೆಗಳ ಜೊತೆ ಸಕ್ರಿಯವಾಗಿ ತೊಡಗಿಕೊಳ್ಳಬೇಕು.